# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶುಕ್ರವಾರ, ಆಗಸ್ಟ್ 23, 2024

ಸಂಪುಟ : 51 ಸಂಚಿಕೆ : 101 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಗುರುರಾಯರ ಉತ್ತರಾರಾಧನೆ ಸಂಭ್ರಮ : ರಥೋತ್ಸವ

ದಾವಣಗೆರೆ, ಆ.22- ಇಲ್ಲಿನ ಕಸ್ತೂರ ಬಾ ಬಡಾವಣೆಯ ರಾಯರ ಮಠದಲ್ಲಿ ಗುರುವಾರ ರಾಘವೇಂದ್ರ ಸ್ವಾಮಿಗಳ ಆರಾಧನೆ ಉತ್ಸವದ ನಿಮಿತ್ತ ಭಕ್ತರ ಮಂತ್ರಘೋಷಗಳ ನಡುವೆ ರಥೋತ್ಸವ ನಡೆಯಿತು.

ಪೂರ್ವಾರಾಧನೆ ಮತ್ತು ಮಧ್ಯಾರಾಧನೆ ಬಳಿಕ ಕೊನೆಯ ದಿನದ ಉತ್ತರಾರಾಧನೆ ರಾಯರ ದಿನ ಗುರುವಾರ ನಡೆದಿರುವುದು ರಾಘವೇಂದ್ರ ಸ್ವಾಮಿಗಳ ಭಕ್ತರಲ್ಲಿ ಹರ್ಷ ಮೂಡಿಸಿತ್ತು.

ಕೊನೆಯ ದಿನದ ಆರಾಧನೆಯನ್ನು ಕಣ್ತುಂಬಿಕೊಳ್ಳಲು ಭಕ್ತರು ಹೆಚ್ಚು ಸಂಖ್ಯೆಯಲ್ಲಿ ಶ್ರೀಮಠಕ್ಕೆ ಭೇಟಿ ನೀಡಿದ್ದರು. ಅಲಂಕೃತಗೊಂಡ ಬೃಂದಾ ವನ ದರ್ಶನ ಪಡೆದು ರಾಯರ ನಾಮ ಜಪಿಸಿದರು.

ಗುರುವಾರ ಸ್ವಪ್ನ ಬೃಂದಾವನಕ್ಕೆ ವಿಶೇಷ ಪೂಜೆ, ವಿವಿಧ ಅಭಿಷೇಕಗಳ ಬಳಿಕ ರಥೋತ್ಸವ ನಡೆಯಿತು. ನಂದ ಕಿಶೋರ ಹಾಗೂ ಭಾರತಿ ಭಜನಾ ಮಂಡಳಿಯವರು ರಾಯರ ಸ್ತೋತ್ರ ಪಠಿಸಿದರು.

ಕಡೂರ್ ಪ್ರಾಣೇಶ್ ಆಚಾರ್, ಕೋಸಾ ಪ್ರಸನ್ನ, ಕಂಪ್ಲಿ ಗುರುರಾಜ್ ಆಚಾರ್, ನಿರಂಜನ್, (2ನೇ ಪುಟಕ್ಕೆ)

# ಮೈತ್ರಿ ಮೇಲೆ ಪ್ರಾಸಿಕ್ಯೂಷನ್ ಅಸ್ತ್ರ?

## ಹೆಚ್.ಡಿ.ಕುಮಾರಸ್ವಾಮಿ, ನಿರಾಣಿ, ಜೊಲ್ಲೆ, ಜನಾರ್ದನ ರೆಡ್ಡಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರ ಅನುಮತಿ ಕೋರಲು ಸಂಪುಟ ನಿರ್ಣಯ

ಬೆಂಗಳೂರು, ಆ. 22 - ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವೆ ಶಶಿಕಲಾ ಜೊಲ್ಲೆ, ಮುರುಗೇಶ್ ನಿರಾಣಿ, ಜನಾರ್ದನ ರೆಡ್ಡಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ರಾಜ್ಯಪಾಲರನ್ನು ಕೋರಿ ರಾಜ್ಯ ಸಚಿವ ಸಂಪುಟ ಇಂದಿಲ್ಲಿ ಮಹತ್ವದ ನಿರ್ಣಯ ಕೈಗೊಂಡಿದೆ.

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ. ಪಾಟೀಲ್, ಇವರ ವಿರುದ್ಧ ಭ್ರಷ್ಟಾಚಾರ ತಡೆ ಕಾಯಿದೆಯಡಿ ತನಿಖಾ ಸಂಸ್ಥೆಗಳು ಆರೋಪ ಪಟ್ಟಿ ಸಹಿತ ಸಲ್ಲಿಸಿರುವ ಅರ್ಜಿಗಳಿಗೆ ತನಿಖೆಗೆ ಆದೇಶ ನೀಡಿ ಎಂಬ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ ಎಂದರು.

ಸಾರ್ವಜನಿಕರ ದೃಷ್ಟಿಯಲ್ಲಿ ರಾಜ್ಯಪಾಲರ ಕಚೇರಿ ತಪ್ಪು ಮಾಡಬಾರದೆಂಬ ಉದ್ದೇಶದಿಂದ ಸಂವಿಧಾನ ವಿಧಿ 163ರಡಿ ಸಂಪುಟಕ್ಕೆ ಇರುವ ಅಧಿಕಾರವನ್ನು ಬಳಕೆ ಮಾಡಿಕೊಂಡು ಸಲಹೆ ಮಾಡುವ ನಿರ್ಣಯ ಕೈಗೊಂಡಿದ್ದೇವೆ. ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಖಾಸಗಿ ವ್ಯಕ್ತಿ ನೀಡಿದ ದೂರನ್ನು ಆಧಾರವಾಗಿ ಇಟ್ಟುಕೊಂಡು ನೀವು ತನಿಖೆಗೆ ಆದೇಶ ಮಾಡಿದ್ದೀರಿ. ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಮ್ಮ ಮುಂದೆ ಅನೇಕ ಪ್ರಕರಣಗಳಿವೆ ಅದರಲ್ಲಿ ಈ ನಾಲ್ವರ ವಿರುದ್ಧ ತನಿಖಾ ಸಂಸ್ಥೆಗಳು ತನಿಖೆ ನಡೆಸಿ ಅವರ (4ನೇ ಪುಟಕ್ಕೆ)

### ಸಿಎಂ ಕೆಳಗಿಳಿಯುವವರೆಗೆ ವಿರಮಿಸುವುದಿಲ್ಲ

**ಬಿಜೆಪಿ ಘೋಷಣೆ**

ಬೆಂಗಳೂರು, ಆ. 22 - ಮುಡಾ ಹಗರಣದಲ್ಲಿ ಸಿಲುಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ದಿಂದ ಕೆಳಗಿಳಿಯುವವರೆಗೂ ವಿಶ್ರಮಿಸುವುದಿಲ್ಲ ಎಂದು ರಾಜ್ಯ ಬಿಜೆಪಿ ಇಂದಿಲ್ಲಿ ಘೋಷಿಸಿದೆ.

ಹಗರಣದ ನೈತಿಕ ಹೊಣೆ ಹೊತ್ತು ರಾಜೀನಾಮೆಗೆ ಒತ್ತಾಯಿಸಿ ರಾಜ್ಯಾದ್ಯಂತ ಬಿಜೆಪಿ ಇಂದು ಪ್ರತಿಭಟನೆ ಹಮ್ಮಿಕೊಂಡಿತ್ತು.

ಇದರ ಅಂಗವಾಗಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ ಭಾಗವಹಿಸಿದ್ದ ಮುಖಂಡರು, ನಮ್ಮ ಗುರಿ ಮುಟ್ಟುವವರೆಗೂ ಹೋರಾಟ ನಿಲ್ಲಿಸುವುದಿಲ್ಲ ಎಂದು ಶಪಥ ಮಾಡಿದರು.

ಭ್ರಷ್ಟಾಚಾರದ ಕಪ್ಪನ್ನು ಅಳಿಸುವವರೆಗೆ, ನಿಮ್ಮನ್ನು ಮನೆಗೆ ಕಳಿಸುವವರೆಗೆ ನಾವು ವಿರಮಿಸುವುದಿಲ್ಲ, ನಾವು ಹೋರಾಟದಿಂದ ಹಿಂದೆ ಸರಿಯುವುದಿಲ್ಲ. ಇಡೀ ರಾಜ್ಯ ಸಿದ್ದರಾಮಯ್ಯನವರ ವಿರುದ್ಧ ಇದೆ, (4ನೇ ಪುಟಕ್ಕೆ)

## ಮುಡಾ: ಇಂದು ಕಾಂಗ್ರೆಸ್ ಹೈಕಮಾಂಡ್ ತೀರ್ಮಾನ

ಬೆಂಗಳೂರು, ಆ. 22 - ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಿಡಿ ನಿವೇಶನಗಳ ಹಂಚಿಕೆ ಹಗರಣದಲ್ಲಿ ಸಿಲುಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಕೀಯ ಭವಿಷ್ಯದ ಬಗ್ಗೆ ಕಾಂಗ್ರೆಸ್ ವರಿಷ್ಠರು ನಾಳೆ ಮಹತ್ವದ ತೀರ್ಮಾನ ತೆಗೆದುಕೊಳ್ಳಲಿದ್ದಾರೆ.

ಈ ಪ್ರಕರಣ ರಾಷ್ಟ್ರಮಟ್ಟದಲ್ಲಿ ಪಕ್ಷಕ್ಕೆ ಭಾರೀ ಮುಜುಗರ ತಂದಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಜೊತೆಗೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನೂ ದೆಹಲಿಗೆ ಬರುವಂತೆ ಬುಲಾವ್ (4ನೇ ಪುಟಕ್ಕೆ)

## ಮಹಿಳಾ ಕುಸ್ತಿ ಪಟುಗೆ ಭದ್ರತೆ ನೀಡಲು ಆದೇಶ

ನವದೆಹಲಿ, ಆ. 22 - ಕುಸ್ತಿ ಒಕ್ಕೂಟದ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಲೈಂಗಿಕ ಪೀಡನೆಯ ಆರೋಪ ಮಾಡಿದ್ದ ಮಹಿಳಾ ಕುಸ್ತಿ ಪಟು ಒಬ್ಬರಿಗೆ ಭದ್ರತೆ ನೀಡಲು ದೆಹಲಿ ನ್ಯಾಯಾಲಯ ಪೊಲೀಸರಿಗೆ ನಿರ್ದೇಶನ ನೀಡಿದೆ.

ಕುಸ್ತಿಪಟುಗಳಿಗೆ ಬುಧವಾರ ರಾತ್ರಿ ಭದ್ರತೆ ವಾಪಸ್ ಪಡೆಯಲಾಗಿದೆ ಎಂದು ನಗರದ ಹೆಚ್ಚುವರಿ ಮ್ಯಾಜಿಸ್ಟ್ರೇಟರ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಲಾಗಿತ್ತು. ಈ ಬಗ್ಗೆ (2ನೇ ಪುಟಕ್ಕೆ)

## ವೈದ್ಯರ ಮುಷ್ಕರಕ್ಕೆ ತೆರೆ

ನವದೆಹಲಿ, ಆ. 22 - ಕೊಲ್ಕತ್ತಾದಲ್ಲಿ ವೈದ್ಯೆ ಮೇಲೆ ನಡೆದ ಹತ್ಯಾಚಾರಕ್ಕೆ ಸಂಬಂಧಿಸಿದಂತೆ ದೆಹಲಿಯ ಎಐಐಎಂಎಸ್ ಹಾಗೂ ಆರ್.ಎಂ.ಎಲ್. ಕಿರಿಯ ವೈದ್ಯರು ಕಳೆದ 11 ದಿನಗಳಿಂದ ನಡೆಸುತ್ತಿದ್ದ ಮುಷ್ಕರವನ್ನು ವಾಪಸ್ ಪಡೆದಿದ್ದಾರೆ. ಸುಪ್ರೀಂ ಕೋರ್ಟ್ ಮುಷ್ಕರ ನಿಲ್ಲಿಸಲು ಕರೆ (2ನೇ ಪುಟಕ್ಕೆ)

## ಕಾಮಗಾರಿ ಬಾರಾ ಕಮಾನ್ ಆಗದಿರಲಿ

### ಎಸ್‌ಸಿಪಿ - ಟಿಎಸ್‌ಪಿ ಯೋಜನೆ ಪ್ರಗತಿ ಪರಿಶೀಲನೆ ಸಭೆಯಲ್ಲಿ ಡಿಸಿ ಸೂಚನೆ



ದಾವಣಗೆರೆ, ಆ. 22 - ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡು ಸಮಾಜಕ್ಕೆ ಆಸ್ತಿಯಾಗಬೇಕು. ಕಟ್ಟಡಗಳ ಕಾಮಗಾರಿಗಳು ಅರೆಬರೆಯಾಗಿ ಬಾರಾ ಕಮಾನ್‌ನಂತೆ ಆಗುವುದು ಬೇಡ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದರು.

ಎಸ್‌ಸಿಪಿ - ಟಿಎಸ್‌ಪಿ ಯೋಜನೆಯ ಪ್ರಗತಿ ವಿವರ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಸ್‌ಸಿಪಿ - ಟಿಎಸ್‌ಪಿ ಯೋಜನೆಯಡಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ ಪೂರ್ಣಗೊಂಡ ಕಾಮಗಾರಿಗಳನ್ನು ಲೋಕಾರ್ಪಣೆ ಮಾಡಲು ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಿದರು.

ಪರಿಶಿಷ್ಟರ ವೈಯಕ್ತಿಕ ಅನುದಾನ ಸಂಪೂರ್ಣ ಬಳಕೆಯಾಗುತ್ತದೆ. ಆದರೆ, ಅಭಿವೃದ್ಧಿ ಕಾಮಗಾರಿಗಳ ವಿಷಯದಲ್ಲಿ ವಿಳಂಬವಾಗುವ ಸಾಧ್ಯತೆ ಇರುತ್ತದೆ ಎಂದು ಜಿಲ್ಲಾಧಿಕಾರಿ ಹೇಳಿದರು. (4ನೇ ಪುಟಕ್ಕೆ)

### ರಂಗಮಂದಿರ ಕಾಮಗಾರಿ ಪೂರ್ಣಗೊಳಿಸಲು ಕ್ರಮ

ನಾನು ಕೆ.ಆರ್.ಐ.ಡಿ.ಎಲ್.ನಲ್ಲಿದ್ದಾಗ ದಾವಣಗೆರೆ ಜಿಲ್ಲಾ ರಂಗಮಂದಿರ ನಿರ್ಮಾಣ ಅಪೂರ್ಣವಾಗಿತ್ತು. ಈಗ ಜಿಲ್ಲಾಧಿಕಾರಿಯಾಗಿ ಬಂದರೂ ಕಾಮಗಾರಿ ಅರ್ಧಕ್ಕೇ ನಿಂತಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದರು. ಕಾಮಗಾರಿಗಳು ಬಾರಾ ಕಮಾನ್ ರೀತಿ ಅರೆಬರೆಯಾಗಿ ನಿಲ್ಲುವುದಕ್ಕೆ ರಂಗಮಂದಿರವೂ ಒಂದು ಉದಾಹರಣೆ ಎಂದರು. ಈ ಕಾಮಗಾರಿಗೆ ಅನುದಾನದ ಅಗತ್ಯವಿದೆ. ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ವಹಿಸುವುದಾಗಿ ಜಿಲ್ಲಾಧಿಕಾರಿ ಹೇಳಿದರು.

## ವೈದ್ಯರಿಗೆ 36 ಗಂಟೆ ಪಾಳಿ ಅಮಾನವೀಯ : ಸುಪ್ರೀಂ

ನವದೆಹಲಿ, ಆ. 22 - ವೈದ್ಯರನ್ನು ನಿರಂತರ 36 ಗಂಟೆಗಳ ಕಾಲ ಕೆಲಸಕ್ಕೆ ಒಳಪಡಿಸುವುದು ಅಮಾನವೀಯ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಕೊಲ್ಕತ್ತಾದ ವೈದ್ಯೆಯ ಹತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವಯಂ ಪ್ರೇರಿತ ವಿಚಾರಣೆ ನಡೆಸುವಾಗ ಸುಪ್ರೀಂ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಕಿರಿಯ ವೈದ್ಯರು ಅಮಾನವೀಯ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೆಲ ವೈದ್ಯರು 36 ಗಂಟೆಗಳ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆ ಗಮನ ಹರಿಸುವ ಅವಶ್ಯಕತೆ ಇದೆ. 36 ಇಲ್ಲವೇ 48 ಗಂಟೆಯ ಪಾಳಿ ಅಮಾನವೀಯ ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರ ಚೂಡ್ ಅವರ ನೇತೃತ್ವದ ಪೀಠ ತಿಳಿಸಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರಿದ್ದಾರೆ.

## ಪುರಸಭೆ ಅಧ್ಯಕ್ಷ - ಉಪಾಧ್ಯಕ್ಷರ ಚುನಾವಣೆಗೆ ತಡೆಯಾಜ್ಞೆ



**ಹರಪನಹಳ್ಳಿ**

ಹರಪನಹಳ್ಳಿ, ಆ.22- ಧಾರವಾಡ ಉಚ್ಚ ನ್ಯಾಯಾಲಯ ಪೀಠದಿಂದ ಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ತಡೆಯಾಜ್ಞೆ ನೀಡಿದ್ದರಿಂದ ಇಲ್ಲಿಯ ಪುರಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನದ ಚುನಾವಣೆ ಪ್ರಕ್ರಿಯೆ ಮುಂದೂಡಿಕೆಯಾಗಿದೆ.

ಅಧ್ಯಕ್ಷ ಸ್ಥಾನಕ್ಕೆ ಸಾಮಾನ್ಯ ಮಹಿಳೆ ಮತ್ತು ಪರಿಶಿಷ್ಟ ಜಾತಿಗೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನದ ವಿಚಾರವಾಗಿ ಪುರಸಭೆಯ ಸದಸ್ಯ ಟಿ. ವೆಂಕಟೇಶ ನ್ಯಾಯಾಲಯದ ಮೊರೆ ಹೋಗಿದ್ದರಿಂದ ನ್ಯಾಯಾಲಯವು ಈ ಚುನಾವಣೆಗೆ ತಡೆಯಾಜ್ಞೆ ನೀಡಿ. ವಿಚಾರಣೆಯನ್ನು ಆ.29ಕ್ಕೆ ಮುಂದೂಡಿದೆ.

ತಡೆಯಾಜ್ಞೆ ಆದೇಶ ಪ್ರತಿ ಸಿಗದಿದ್ದರಿಂದ ತಹಶೀಲ್ದಾರ್ ಬಿ.ವಿ. ಗಿರೀಶ್ ಬಾಬು ಆ.21ರ ಬೆಳಗ್ಗೆ 10.30ಕ್ಕೆ ಚುನಾವಣಾ ಪ್ರಕ್ರಿಯೆ ಆರಂಭಿಸಿದರು.

ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದಿಂದ 20ನೇ ವಾರ್ಡಿನ ಫಾತೀಮಾಬೀ ಹಾಗೂ ಬಿಜೆಪಿಯಿಂದ ಕೌಟಿ ಸುಮಾ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದ ಎಚ್. ಕೊಟ್ರೇಶ್ ನಾಮಪತ್ರ ಸಲ್ಲಿಸಿದ್ದರು.

ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಹಾಗೂ ಪುರಸಭೆ ಸದಸ್ಯರು ಪುರಸಭಾ ಸಭಾಂಗಣಕ್ಕೆ ಆಗಮಿಸಿದ ನಂತರ ಕಿರಣ್ ಶ್ಯಾನಭಾಗ್, ಹರಾಳ್ ಅಶೋಕ, ಎಂ.ಕೆ. ಜಾವೀದ್, ಡಿ. ರೊಕ್ಕಪ್ಪ ಹಾಗೂ ಕೌಟಿ ಸುಮಾ ಉಚ್ಚ ನ್ಯಾಯಾಲಯ ನೀಡಿದ ತಡೆಯಾಜ್ಞೆ ಆದೇಶ ಪ್ರತಿಯನ್ನು ಚುನಾವಣಾಧಿಕಾರಿ ತಹಶೀಲ್ದಾರ್ ಬಿ.ವಿ. ಗಿರೀಶ್ ಬಾಬು ಅವರಿಗೆ ಸಲ್ಲಿಸಿದ್ದರಿಂದ ಚುನಾವಣೆ ಪ್ರಕ್ರಿಯೆ ಮುಂದೂಡಿದರು.

ಕಾಂಗ್ರೆಸ್ ಪಕ್ಷಕ್ಕೆ ಸರಳ ಬಹುಮತವಿದ್ದರೂ ಪುರಸಭೆ ಆಡಳಿತದ ಗದ್ದುಗೆ ಏರಲು ವಿಫಲವಾಯಿತು. ನ್ಯಾಯಾಲಯ ನೀಡುವ ತೀರ್ಮಾನದ ಮೇಲೆ ಯಾರಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನ ಒಲಿಯಲಿದೆ ಎಂದು ತಿಳಿಯಲಿದೆ.

> ಪುರಸಭಾ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣಾ ಪ್ರಕ್ರಿಯೆಗೆ ಧಾರವಾಡ ಉಚ್ಚ ನ್ಯಾಯಲಯ ನೀಡಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಲು ಪ್ರಯತ್ನಿಸುತ್ತೇವೆ. ನ್ಯಾಯಾಲಯ ನೀಡಿದ ತಡೆಯಾಜ್ಞೆಯನ್ನು ಶೀಘ್ರದಲ್ಲೇ ತೆರವುಗೊಳಿಸಿ ಇದೇ ಮೀಸಲಾತಿಯಡಿ ಬರುವ ದಿನಗಳಲ್ಲಿ ಚುನಾವಣೆ ನಡೆಯುತ್ತವೆ.
>
> - ಎಂ.ಪಿ.ಲತಾ ಮಲ್ಲಿಕಾರ್ಜುನ್. ಶಾಸಕರು

## ನೀರಿನ ದರ ಹೆಚ್ಚಳ : ಯಾರಿಗೂ ಕೇರ್ ಮಾಡಲ್ಲ ಎಂದ ಡಿಕೆಶಿ



ಬೆಂಗಳೂರು, ಆ. 22 - ನಾಗರಿಕರಿಗೆ ಎಷ್ಟೇ ಅನುಕೂಲ ಮಾಡಿಕೊಟ್ಟರೂ ಉಪಕಾರ ಸ್ಮರಣೆಯೇ ಇಲ್ಲ ಎಂದಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕುಡಿಯುವ ನೀರಿದ ದರ ಹೆಚ್ಚಳ ಮಾಡಿಯೇ ಮಾಡುತ್ತೇನೆ ಎಂದು ತಿಳಿಸಿದ್ದಾರೆ.

ಜನ, ರಾಜಕಾರಣಿಗಳು, ಮಾಧ್ಯಮ, ಎಷ್ಟೇ ನಿಂದಿಸಲಿ, ನಾನು ನೀರಿನ ದರ ಏರಿಸಿಯೇ ಏರಿಸುತ್ತೇನೆ. ನಾನು ಯಾರಿಗೂ ಕೇರ್ ಮಾಡುವುದಿಲ್ಲ, ನೀರಿನ ದುಡ್ಡು ಕಟ್ಟುವವರು ಕಟ್ಟುತ್ತಾರೆ, ಇನ್ನು ಕೆಲವರು ಉಚಿತವಾಗಿ ಬಳಕೆ ಮಾಡುತ್ತಾರೆ ಎಂದರು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ನಡೆದ ಸಮಾರಂಭದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ 12-13 ವರ್ಷಗಳಿಂದ ನೀರಿನ ದರ ಹೆಚ್ಚಳ ಮಾಡಿಯೇ ಇಲ್ಲ. (2ನೇ ಪುಟಕ್ಕೆ)

## ಹಾಲಿನ ಉತ್ಪನ್ನ ವಿಭಜನೆಗೆ ತಡೆ

ನವದೆಹಲಿ, ಆ. 22 - ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಎ1 ಹಾಗೂ ಎ2 ಎಂದು ವಿಭಜಿಸಿ ಮಾರಾಟ ಮಾಡುವುದನ್ನು ನಿಲ್ಲಿಸುವಂತೆ ಆಹಾರ ನಿಯಂತ್ರಕ ಸಂಸ್ಥೆಯಾದ ಎಫ್.ಎಸ್.ಎಸ್.ಎ.ಐ. ನಿರ್ದೇಶನ ನೀಡಿದೆ. ಹಾಲನ್ನು ಈ ರೀತಿ ಪ್ರತ್ಯೇಕಿಸುವುದು ತಪ್ಪು ದಾರಿಗೆಳೆ ದಂತೆ. ಈ ರೀತಿ ಪ್ರತ್ಯೇಕಗೊಳಿಸುವುದು 2006ರ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಕಾಯ್ದೆಗೆ ಅನುಗುಣವಾಗಿಲ್ಲ ಎಂದು ಆಹಾರ ನಿಯಂತ್ರಕ ತಿಳಿಸಿದೆ. ಹಾಲಿನಲ್ಲಿರುವ ಪ್ರೋಟೀನ್ (4ನೇ ಪುಟಕ್ಕೆ)

## ಹತ್ಯಾಚಾರ : ತನಿಖೆ ರೀತಿಗೆ ಸುಪ್ರೀಂ ತರಾಟೆ

### ಮುಷ್ಕರ ನಿರತ ವೈದ್ಯರು ಕರ್ತವ್ಯಕ್ಕೆ ಮರಳಲು ಸೂಚನೆ

ನವದೆಹಲಿ, ಆ. 22 – ಆರ್.ಜಿ. ಕರ್ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯೆ ಮೇಲೆ ನಡೆದ ಅತ್ಯಾಚಾರ ಹಾಗೂ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಲ್ಕತ್ತಾ ಪೊಲೀಸರು ಪ್ರಕರಣ ದಾಖಲಿಸಿಕೊಳ್ಳಲು ವಿಳಂಬ ಮಾಡಿರುವುದು ವಿಚಲಿತಗೊಳಿಸುವಂಥದ್ದಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯ ಹಾಗೂ ಚಿಕಿತ್ಸೆಯನ್ನು ನಿಲ್ಲಿಸಲಾಗದು ಎಂದು ಹೇಳಿರುವ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠ, ಮುಷ್ಕರ ನಿರತ ವೈದ್ಯರು ಕರ್ತವ್ಯಕ್ಕೆ ಮರಳ ಬೇಕೆಂದು ಕೇಳಿದೆ. ಕೊಲ್ಕೊತಾ ವೈದ್ಯೆ ಘಟನೆಯ ಕುರಿತು ಸ್ವಯಂ ಪ್ರೇರಿತ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್ ದೇಶಾದ್ಯಂತ ವೈದ್ಯರ ರಕ್ಷಣೆಗಾಗಿ ಸಾಂಸ್ಥಿಕ ಕ್ರಮಗಳನ್ನು ತೆಗೆದುಕೊಳ್ಳುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ತಿಳಿಸಿದೆ. ವೈದ್ಯರ ಸುರಕ್ಷತೆ, ಪ್ರತಿಭಟನಾ ನಿಯಮಗಳು, ಪ್ರತಿಭಟನಾ ಕಾರರ ಹಕ್ಕು ಹಾಗೂ ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಹಲವಾರು ನಿರ್ದೇಶನಗಳನ್ನು ನೀಡಿದೆ.

ಸುಪ್ರೀಂ ಕೋರ್ಟ್ ನೇಮಿಸಿರುವ (2ನೇ ಪುಟಕ್ಕೆ)


## 13ನೇ ವರ್ಷದ ಪುಣ್ಯಸ್ಮರಣೆ



**ಶರಣ ಕೆ.ಆರ್.ರಮೇಶ್**

ನಿಧನ : 23.08.2011

ನೀವು ನಮ್ಮನ್ನಗಲಿ ಇಂದಿಗೆ ಹದಿಮೂರು ವರ್ಷಗಳಾದವು.

ಸದಾ ನಿಮ್ಮ ಸ್ಮರಣೆಯಲ್ಲಿರುವ,

ಶ್ರೀಮತಿ ಕೆ.ಜಿ. ಗಿರಿಜಮ್ಮ ಮತ್ತು ಶ್ರೀ ಕೆ.ಜಿ.ರೇವಣಸಿದ್ದಪ್ಪ

1ನೇ ದರ್ಜೆ ಗುತ್ತಿಗೆದಾರರು ಹಾಗೂ

ಮಾಜಿ ಪ್ರಧಾನರು, ಕುರ್ಕಿ, ದಾವಣಗೆರೆ ತಾಲ್ಲೂಕು.

ಪತ್ನಿ : ಶ್ರೀಮತಿ ಸವಿತಾ ರಮೇಶ್ ಕೆ.ಆರ್.

ಕು|| ಡಾ. ಅನುಷಾ ಕೆ.ಆರ್., ಕು|| ಅಮೂಲ್ಯ

ಸಹೋದರಿಯರು ಹಾಗೂ ಮಾವಂದಿರು

ಬಂಧು-ಮಿತ್ರರು, ಕುರ್ಕಿ.

ಜಿ.ಆರ್. ಸರ್ವೀಸ್ ಸ್ಟೇಷನ್, ತೋಳಹುಣಸೆ.

ಜ್ಯೋತಿ ಸರ್ವೀಸ್ ಸ್ಟೇಷನ್, ಅಣಜಿ.



## ನೋಟೀಸ್

Ref No. 73A/2024 Date : 22.08.2024

ಇವರಿಗೆ : ಶ್ರೀ ಸುರೇಶ ಕೆ.ಹೆಚ್ ಬಿನ್ ಕೆ. ಹನುಮಂತಪ್ಪ
ನಂ.709/2014, 1ನೇ ಕ್ರಾಸ್, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ.

ನನ್ನ ಕಕ್ಷಿದಾರರಾದ :

1) ಶ್ರೀಮತಿ ಕರಿಯಮ್ಮ ಕೋಂ ನಿಂಗಪ್ಪ 2) ಶ್ರೀ ನೀಲಪ್ಪ ಬಿನ್ ಸಣ್ಣಮೈಲಪ್ಪ 3) ಶ್ರೀಮತಿ ಹಾಲಮ್ಮ ಕೋಂ ನೀಲಪ್ಪ 4) ಶ್ರೀಮತಿ ಮಂಜಮ್ಮ ಬಿನ್ ನೀಲಪ್ಪ 5) ಶ್ರೀಮತಿ ಸುನಿತಾ ಬಿನ್ ನೀಲಪ್ಪ 6). ಶ್ರೀಮತಿ ಶೃತಿ ಬಿನ್ ನೀಲಪ್ಪ 7) ಶ್ರೀಮತಿ ದೀಪಾ ಬಿನ್ ನೀಲಪ್ಪ 8) ಶ್ರೀ ಗಂಗಪ್ಪ ಬಿನ್ ಸಣ್ಣಮೈಲಪ್ಪ (ಇವರ ಮೈನರ್ ಮಗನಾದ ಕಿರಣ ರವರ ಪರವಾಗಿ ಮೈನರ್ ಗಾರ್ಡಿಯನ್ ಆಗಿ ಪ್ರತಿನಿಧಿಸಿರುತ್ತಾರೆ) 9) ಶ್ರೀಮತಿ ಕೊಟ್ರಮ್ಮ ಕೋಂ ಗಂಗಪ್ಪ 10) ಶ್ರೀ ಮಹಂತೇಶ್ ಬಿನ್ ಗಂಗಪ್ಪ. 11) ಶ್ರೀಮತಿ ರೇಖಾ ಬಿನ್ ಗಂಗಪ್ಪ 12) ಶ್ರೀ ಹನುಮಂತಪ್ಪ ವುಬ್ ಸಣ್ಣ ಮೈಲಪ್ಪ (ಇವರ ಮೈನರ್ ಮಗಳಾದ ರೇವತಿರವರ ಪರವಾಗಿ ಮೈನರ್‌ಗಾರ್ಡಿಯನ್ ಆಗಿ ಪ್ರತಿನಿಧಿಸಿರುತ್ತಾರೆ) 13) ಶ್ರೀಮತಿ ಗಂಗಮ್ಮ ಕೋಂ ಹನುಮಂತಪ್ಪ 14) ಶ್ರೀ ನಿಂಗರಾಜು ಬಿನ್ ಸಣ್ಣ ಮೈಲಪ್ಪ (ಇವರ ಮೈನರ್ ಮಕ್ಕಳಾದ ರಾಜೇಶ್ವರಿ ಮತ್ತು ಧನುರವರ ಪರವಾಗಿ ಮೈನರ್ ಗಾರ್ಡಿಯನ್ ಆಗಿ ಪ್ರತಿನಿಧಿಸಿರುತ್ತಾರೆ) 15) ಶ್ರೀಮತಿ ಚಂದ್ರಮ್ಮ ಕೋಂ ನಿಂಗರಾಜು 16) ಶ್ರೀ ಅಂಜಿನಪ್ಪ ಬಿನ್ ಸಣ್ಣ ಮೈಲಪ್ಪ (ಇವರ ಮೈನರ್ ಮಕ್ಕಳಾದ ರೋಹಿಣಿ ಮತ್ತು ಗಗನ ರವರ ಪರವಾಗಿ ಮೈನರ್‌ಗಾರ್ಡಿಯನ್ ಆಗಿ ಪ್ರತಿನಿಧಿಸಿರುತ್ತಾರೆ) 17) ಶ್ರೀಮತಿ ಲಲಿತಾ ಕೋಂ ಅಂಜಿನಪ್ಪ ಇವರೆಲ್ಲರ ವಾಸ: ನಾಗನೂರು ಗ್ರಾಮ, ದಾವಣಗೆರೆ ತಾಲ್ಲೂಕು.

ಇವರುಗಳ ಇರಾದೆಯ ಮೇರೆಗೆ ನಿಮಗೆ ನೀಡುತ್ತಿರುವ ನೋಟೀಸ್ ಏನೆಂದರೆ:-

ನಮ್ಮ ಕಕ್ಷಿದಾರರು ನಾಗನೂರು ಗ್ರಾಮದ ಸ.ನಂ.189 ರಲ್ಲಿ ಇರುವ 0-31 ಗುಂಟೆ ಜಮೀನಿನ ಬಾಬ್ತು ನಿಮಗೆ ದಿನಾಂಕ 10.05.2016 ರಂದು ನೋಂದಾಯಿತ ಅಧಿಕಾರ ಪತ್ರ ಕೊಟ್ಟಿರುವುದು ಸರಿಯಷ್ಟೆ. ತಾವುಗಳು ನಮ್ಮ ಕಕ್ಷಿದಾರರಿಗೆ ಸಂಬಂಧಪಟ್ಟ ಹಾಗೆ ಯಾವುದೇ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದರಿಂದ ನಮ್ಮ ಕಕ್ಷಿದಾರರು ಸದರಿ ನೋಂದಾಯಿತ ಅಧಿಕಾರ ಪತ್ರವನ್ನು ಇಂದು ರದ್ದುಪಡಿಸಿರುತ್ತಾರೆ.

2. ಇಂದಿನಿಂದ ದಿನಾಂಕ 10.05.2016 ರ ನೋಂದಾಯಿತ ಅಧಿಕಾರ ಪತ್ರವು ರದ್ದಾಗಿರುವುದರಿಂದ ಸದರಿ ಅಧಿಕಾರ ಪತ್ರದ ಆಧಾರದ ಮೇಲೆ ತಾವುಗಳು ಯಾವುದೇ ವ್ಯವಹಾರವನ್ನು ಮಾಡಿದ್ದಾಗಲೀ ಅಥವಾ ಮಾಡುವುದಾಗಲೀ ಕಂಡುಬಂದಲ್ಲಿ ತಮ್ಮ ಮೇಲೆ ನಮ್ಮ ಕಕ್ಷಿದಾರರು ಸಿವಿಲ್ ಹಾಗು ಮೊಕದ್ದಮೆ ದಾಖಲು ಮಾಡಲಿದ್ದಾರೆ.

3. ತಾವುಗಳು ಸದರಿ ನೋಂದಾಯಿತ ಅಧಿಕಾರ ಪತ್ರದ ಆಧಾರದ ಮೇಲೆ ಯಾವುದೇ ಹಿಂದಿನ ವ್ಯವಹಾರವನ್ನು ಮಾಡಿದ್ದರೂ ಸಹಿತ ನಿಮ್ಮ ಹಾಗು ನಮ್ಮ ಕಕ್ಷಿದಾರರ ನಡುವೆ ಅಗಿರುಬಹುದಾದ ದಾಖಲೆಯ ಅನುಸಾರ ನಮ್ಮ ಕಕ್ಷಿದಾರರಿಗೆ ತಾವುಗಳು ಇಲ್ಲಿಯವರೆಗೂ ಯಾವುದೇ ಸಹಕಾರವಾಗಲೀ, ಹಣ ಸಂದಾಯವಾಗಲೀ ಮಾಡಿರುವುದಿಲ್ಲ.

4. ಈ ನೋಟೀಸ್ ಮೂಲಕ ತಮಗೆ ತಿಳಿಸುವುದೇನೆಂದರೆ, ದಿನಾಂಕ 10.05.2016 ರ ನೋಂದಾಯಿತ ಅಧಿಕಾರ ಪತ್ರವು ರದ್ದಾಗಿರುತ್ತದೆ. ಸದರಿ ನೋಂದಾಯಿತ ಅಧಿಕಾರ ಪತ್ರವು ಆಗುವ ಸಮಯದಲ್ಲಿ ನಮ್ಮ ಕಕ್ಷಿದಾರರ ಪೈಕಿ ಕೆಲವರು ಅಪ್ರಾಪ್ತ ವಯಸ್ಸಿನವರಾಗಿದ್ದು, ಈಗ ಅವರು ಪ್ರಾಪ್ತ ವಯಸ್ಸಿಗೆ ಬಂದಿರುವುದರಿಂದಲೂ ಹಾಗೂ ಅವರುಗಳು ತಮಗೆ ಅಧಿಕಾರ ಪತ್ರ ಕೊಡುವ ಇಚ್ಛೆ ಇಲ್ಲದೇ ಇರುವುದರಿಂದಲೂ ಸಹ ತಮ್ಮ ಸದರಿ ನೋಂದಾಯಿತ ಅಧಿಕಾರ ಪತ್ರವನ್ನು ರದ್ದುಪಡಿಸಿರುತ್ತಾರೆ.

ಸಹಿ /- ಹೆಚ್.ವಿ. ರಾಮದಾಸ್, ವಕೀಲರು
"ಸದ್ಗುರು" 64, 2ನೇ ಮೇನ್ ರೋಡ್, ಪಿ.ಜೆ. ಬಡಾವಣೆ, ದಾವಣಗೆರೆ.

## ಹೊನ್ನೂರು ಗೊಲ್ಲರಹಟ್ಟಿಯಲ್ಲಿ ಇಂದು ಮಾರಮ್ಮ ದೇವಿ ದೇವಸ್ಥಾನ ಉದ್ಘಾಟನೆ




ದಾವಣಗೆರೆ ತಾಲ್ಲೂಕು ಹೊನ್ನೂರು ಗೊಲ್ಲರಹಟ್ಟಿಯಲ್ಲಿ ಇಂದು ಮಾರಮ್ಮ ದೇವಿ ದೇವಸ್ಥಾನ ಉದ್ಘಾಟನೆ, ಕಳಸಾರೋಹಣ ಮತ್ತು ಚಂಡಿಕಾ ಹೋಮ ಕಾರ್ಯಕ್ರಮವು ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಸಾನ್ನಿಧ್ಯದಲ್ಲಿ, ಚಿತ್ರದುರ್ಗ ಯಾದವ ಗೊಲ್ಲಗಿರಿ ಸುಕ್ಷೇತ್ರದ ಶ್ರೀ ಕೃಷ್ಣ ಯಾದವಾನಂದ ಸ್ವಾಮೀಜಿ ಅಮೃತ ಹಸ್ತದಿಂದ ಇಂದು ನೆರವೇರಲಿದೆ.

ಬೆಳಿಗ್ಗೆ 8.20ಕ್ಕೆ ಪ್ರತಿಷ್ಠಾಂಗ ಹೋಮ, ನಂತರ 10.20ಕ್ಕೆ ಶ್ರೀದೇವಿಯ ಪ್ರಾಣ ಪ್ರತಿಷ್ಠಾಪನೆ ನಡೆಯಲಿದೆ. ಮಧ್ಯಾಹ್ನ 12.20ಕ್ಕೆ ಪೂರ್ಣಾಹುತಿ, ಕಲಶಾಭಿಷೇಕ ನೆರವೇರಲಿದೆ. ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ರಾತ್ರಿ 8 ಗಂಟೆಗೆ ಶ್ರೀ ಕೃಷ್ಣ ಕಲಾ ಮಂಡಳಿಯಿಂದ ಭಜನೆ, ಕೋಲಾಟ ಹಮ್ಮಿಕೊಳ್ಳಲಾಗಿದೆ.

# ತುಂಗಾರತಿ ಸ್ಥಳದಲ್ಲಿ ಭರದಿಂದ ಸಾಗಿರುವ ಉದ್ಯಾನವನ ನಿರ್ಮಾಣ



ತುಂಗಾರತಿ ಸ್ಥಳದಲ್ಲಿ ಈಗಾಗಲೇ ಶೇ. 70 ರಷ್ಟು ಕಾಮಗಾರಿ ಆಗಿದೆ.
ಶಂಕರಾಚಾರ್ಯರು, ಮಧ್ವಾಚಾರ್ಯರು, ರಾಮಾನುಜಾಚಾರ್ಯರು, ಬಸವೇಶ್ವರರು, ಅಕ್ಕಮಹಾದೇವಿ, ಅಲ್ಲಮಪ್ರಭು, ಪತಂಜಲಿ, ಧನ್ವಂತರಿ ಮೂರ್ತಿಗಳನ್ನು ಅಮೃತ ಶಿಲೆಯಲ್ಲಿ ನಿರ್ಮಾಣ ಮಾಡಲಾಗುತ್ತದೆ.
ಜೊತೆಗೆ ಈ ಸ್ಥಳದಲ್ಲಿ ದೇವಸ್ಥಾನ ಇದ್ದರೇ ಭಯ-ಭಕ್ತಿ ಬರುತ್ತದೆ. ಆ ದೃಷ್ಟಿಯಿಂದ ಪ್ರವಾಸಿಗರಿಗೆ ಭಕ್ತಿ ಮೂಡಿಸುವ ನಿಟ್ಟಿನಲ್ಲಿ ತುಂಗಭದ್ರೇಶ್ವರ ದೇವಸ್ಥಾನ ನಿರ್ಮಾಣ.
ಮಹಿಳೆಯರಿಗೆ ಬಟ್ಟೆಗಳನ್ನು ಬದಲಿಸುವುದಕ್ಕೆ ಸುಸಜ್ಜಿತ ಕೊಠಡಿ ಮತ್ತು ಶೌಚಾಲಯ ನಿರ್ಮಾಣ ಮಾಡಲಾಗುತ್ತದೆ.

- ಶ್ರೀ ಜಗದ್ಗುರು ವಚನಾನಂದ ಸ್ವಾಮೀಜಿ, ಪಂಚಮಸಾಲಿ ಗುರುಪೀಠಾಧ್ಯಕ್ಷರು

ಹರಿಹರ, ಆ,22- ನಗರದ ರಾಘವೇಂದ್ರ ಸ್ವಾಮಿ ಮಠದ ಹಿಂಬದಿಯ ತುಂಗಭದ್ರಾ ನದಿ ತಟದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ತುಂಗಾರತಿ ಸ್ಥಳದಲ್ಲಿ ಉದ್ಯಾನವನ ನಿರ್ಮಾಣಕ್ಕಾಗಿ ವಿವಿಧ ಬಗೆಯ ಸಸಿಗಳನ್ನು ಬೆಳೆಸುವ ಕಾರ್ಯ ಪಂಚಮಸಾಲಿ ಗುರು ಪೀಠಾಧ್ಯಕ್ಷರಾದ ಶ್ರೀ ವಚನಾನಂದ ಮಹಾಸ್ವಾಮಿಗಳ ನೇತೃತ್ವದಲ್ಲಿ ಭರದಿಂದ ನಡೆದಿದೆ.

ಕಾಶಿ ಕ್ಷೇತ್ರದಲ್ಲಿ ನಡೆಯುವ ತುಂಗಾರತಿ ಮಾದರಿಯಂತೆ ಹರಿಹರ ನಗರದ ತುಂಗಭದ್ರಾ ನದಿಯ ದಂಡೆಯ ಮೇಲೆ ತುಂಗಾರತಿ ಮಾಡುವ ಕಲ್ಪನೆ ಇಟ್ಕೊಂಡು ಶ್ರೀಗಳು ಈಗಾಗಲೇ ತುಂಗಭದ್ರಾ ನದಿಯ ದಡದಲ್ಲಿರುವ ಸ್ಥಳದಲ್ಲಿ ಸುಮಾರು10 ಕೋಟಿ ರೂ. ವೆಚ್ಚದಲ್ಲಿ ಬಹಳಷ್ಟು ಕಾಮಗಾರಿ ಮಾಡಿ ಒಂದು ಹಂತಕ್ಕೆ ತಂದಿದ್ದಾರೆ.

ಈ ಸ್ಥಳದಲ್ಲಿ ರಾಘವೇಂದ್ರ ಸ್ವಾಮಿಗಳ ಮಠದ ಹಿಂಬದಿಯಿಂದ ಹಿಡಿದು ನದಿ ನೀರು ಹರಿಯುವ ಸ್ಥಳದವರೆಗೂ ಕಲ್ಲು ಬಂಡೆಗಳನ್ನು ಒಡೆದು ಆ ಸ್ಥಳದಲ್ಲಿ ಬಿಳಿ ಗ್ರಾನೈಟ್ ಕಲ್ಲುಗಳನ್ನು ಹಾಕಿಸಿದ್ದಾರೆ. ಬಿಳಿ ಗ್ರಾನೈಟ್ ಮೇಲೆ ಎಂಟು ಬೃಹತ್ ಕರಿ ಕಲ್ಲಿನಿಂದ ಶಿಲಾ ಮಂಟಪ ನಿರ್ಮಾಣ ಮಾಡಲಾಗಿದೆ. ಹನ್ನೆರಡು ಅಡಿ ಎತ್ತರದ ಶಿವನ ಪ್ರತಿಮೆ ಸ್ಥಾಪಿಸಲಾಗಿದೆ.

ಸೇತುವೆ ಪಕ್ಕದಲ್ಲಿರುವ ಗೋಡೆ ಸಾಕಷ್ಟು ಶಿಥಿಲವಾಗಿತ್ತು. ಮಳೆ ಬಂದಾಗ ಕುಸಿಯುವ ಹಂತದಲ್ಲಿತ್ತು. ಅದನ್ನು ಕಾಂಕ್ರೀಟ್ ಹಾಕಿ ಸುಂದರವಾಗಿ ಕಾಣುವಂತೆ ಮಾಡಿದ್ದಾರೆ. ಮೈದುಂಬಿ ಹರಿಯುತ್ತಿರುವ ತುಂಗಭದ್ರೆ ನೋಡಿ ಕಣ್ತುಂಬಿಕೊಳ್ಳಲು ಬಂದ ಸಹಸ್ರಾರು ಪ್ರವಾಸಿಗರು ತುಂಗಾರತಿ ಸ್ಥಳಕ್ಕೆ ಭೇಟಿ ನೀಡಿ, ಕಾಮಗಾರಿ ವೀಕ್ಷಿಸುವುದರ ಜೊತೆಗೆ ನಿರ್ಮಾಣವಾಗಿರುವ ಮಂಟಪದ ಬಳಿ ಫೋಟೋ ತೆಗೆಸಿಕೊಂಡು ಸಂತಸಪಡುವ ದೃಶ್ಯ ಕಂಡು ಬಂತು.

ಮುಂಬರುವ ದಿನಗಳಲ್ಲಿ ಇದೊಂದು ಐತಿಹಾಸಿಕ ಸ್ಥಳವಾಗಿ ಮಾರ್ಪಾಡಾಗಲಿದೆ ಎಂಬ ಅಭಿಪ್ರಾಯ ಜನರಿಂದ ವ್ಯಕ್ತವಾಗುತ್ತಿದೆ. ಪ್ರವಾಸಿಗರು ಬಂದು ಹೋಗುವುದನ್ನು ಗಮನಿಸಿದ ವಚನಾನಂದ ಶ್ರೀ ಮತ್ತಷ್ಟು ಅಭಿವೃದ್ಧಿ ಮಾಡಬೇಕು ಎಂದು ತೀರ್ಮಾನ ತೆಗೆದುಕೊಳ್ಳುವ ಮೂಲಕ, ಈ ಸ್ಥಳದಲ್ಲಿ ಅಡಿಕೆ, ತೆಂಗು, ಮಾವು, ಸೇರಿದಂತೆ ಹತ್ತಕ್ಕೂ ಹೆಚ್ಚು ಬಗೆಯ ತಳಿಗಳ ನೂರಾರು ಗಿಡಗಳನ್ನು ಬೆಂಗಳೂರಿನಿಂದ ತರಿಸಿಕೊಂಡು ನೆಟ್ಟು ಆ ಸ್ಥಳವನ್ನು ಉದ್ಯಾನವನದ ಮಾದರಿಯಲ್ಲಿ ನಿರ್ಮಾಣ ಮಾಡುತ್ತಿರುವುದರಿಂದ, ಈ ಸ್ಥಳಕ್ಕೆ ಮತ್ತಷ್ಟು ಜೀವಕಳೆ ಬಂದಿದ್ದು, ಇದರಿಂದಾಗಿ ಮತ್ತಷ್ಟು ಪ್ರವಾಸಿಗರನ್ನು ಆಕರ್ಷಿಸುವ ಕ್ಷೇತ್ರವಾಗಿ ಹೊರಹೊಮ್ಮಿದೆ.




ಅನ್ವೇಷಕರು ಆರ್ಟ್ ಫೌಂಡೇಶನ್ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ 6ನೇ ಶೈಕ್ಷಣಿಕ ರಂಗಯಾತ್ರೆ ಅಂಗವಾಗಿ ಪೂರ್ಣಚಂದ್ರ ತೇಜಸ್ವಿ ಅವರ 'ಕೃಷ್ಣೇಗೌಡನ ಆನೆ' ನಾಟಕ ಪ್ರದರ್ಶನ ನಡೆಯಿತು. ದಾವಣಗೆರೆ ಕುವೆಂಪು ಕನ್ನಡ ಭವನದಲ್ಲಿ ನಡೆದ ಈ ನಾಟಕದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಅಭಿನಯಿಸಿದರು.

## ಹೊನ್ನಾಳಿಯಲ್ಲಿ ಇಂದು ಕಾಂಗ್ರೆಸ್‌ನಿಂದ ಬೃಹತ್ ಪ್ರತಿಭಟನೆ

ಹೊನ್ನಾಳಿ, ಆ.22- ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸಂಬಂಧವೇ ಇಲ್ಲದ ಪ್ರಕರಣದಲ್ಲಿ ರಾಜ್ಯಪಾಲರು ಪ್ರಾಸಿಕ್ಯೂಶನ್‌ಗೆ ಅನುಮತಿ ನೀಡಿರುವುದನ್ನು ಖಂಡಿಸಿ ಇಂದು ಬೆಳಿಗ್ಗೆ 11 ಕ್ಕೆ ಪಟ್ಟಣದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಡಿ.ಜಿ.ಶಾಂತನಗೌಡ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯಪಾಲರೇ ಕರ್ನಾಟಕ ಬಿಟ್ಟು ತೊಲಗಿ ಎಂಬ ಎಚ್ಚರಿಕೆಯ ಘೋಷ ವಾಕ್ಯದೊಂದಿಗೆ ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕುಗಳ ಕಾಂಗ್ರೆಸ್ ಪಕ್ಷ, ಅಹಿಂದ ಒಕ್ಕೂಟ, ಸಿದ್ದರಾಮಯ್ಯ ಅಭಿಮಾನಿ ಬಳಗ, ರೈತ ಸಂಘಟನೆಗಳು, ಕಾರ್ಮಿಕ ವರ್ಗ ಮತ್ತು ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಮಾನವ ಸರಪಳಿ ನಿರ್ಮಿಸಿ, ಪ್ರತಿಭಟನಾ ಮೆರವಣಿಗೆಯ ಮೂಲಕ ತಾಲ್ಲೂಕು ಕಚೇರಿಗೆ ತಲುಪಿ ರಾಷ್ಟ್ರಪತಿಯವರಿಗೆ ರಾಜ್ಯಪಾಲರ ನಡೆ ಖಂಡಿಸಿ ಮನವಿ ಸಲ್ಲಿಸಲಾಗುವುದು ಎಂದು ಮಾಹಿತಿ ನೀಡಿದರು. ಸಿದ್ದರಾಮಯ್ಯ ಈ ದೇಶದ ಆಸ್ತಿ, ಅವರನ್ನು ಸಿಎಂ ಗಾದಿಯಲ್ಲಿ ಉಳಿಸಿಕೊಳ್ಳಲು ನಾವೆಲ್ಲರೂ ತೀರ್ಮಾನಿಸಿದ್ದು, ಅದಕ್ಕಾಗಿ ಹೋರಾಟದ ಕರೆ ನೀಡಿದ್ದೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಎಚ್.ಬಿ.ಮಂಜಪ್ಪ, ಆರ್. ನಾಗಪ್ಪ, ಸಣ್ಣಕ್ಕಿ ಬಸವನಗೌಡ, ಡಿ.ಜಿ.ವಿಶ್ವನಾಥ್, ಎಚ್.ಎ.ಉಮಾಪತಿ, ಎ.ಆರ್.ಚಂದ್ರಶೇಖರಪ್ಪ, ಹನುಮನಹಳ್ಳಿ ಬಸವರಾಜಪ್ಪ, ಕೆಂಗಲಹಳ್ಳಿ ಷಣ್ಮುಖಪ್ಪ, ಎಚ್.ಎ.ಗದ್ದಿಗೇಶ್, ಜಿ.ಪಿ.ವರದರಾಜಪ್ಪಗೌಡ, ಪುಷ್ಪಾ ರವೀಶ್, ವನಜಾಕ್ಷಮ್ಮ, ಬಣಜಾರ್ ಸಮಾಜದ ಮುಖಂಡ ವಸಂತನಾಯ್ಕ, ಛಲವಾದಿ ಸಮಾಜದ ಕುರುವ ಮಂಜುನಾಥ್, ರುದ್ರೇಶ್ ಕೊಡತಾಳ್, ಕುರುಬ ಸಮಾಜದ ಖಜಾಂಚಿ ಎಚ್.ಎ. ನರಸಿಂಹಪ್ಪ, ಕೆ. ಪುಟ್ಟಪ್ಪ, ಎಚ್.ಡಿ. ವಿಜೇಂದ್ರಪ್ಪ, ಕುಂಬಳೂರು ವಾಗೀಶ್, ಕೃಷ್ಣಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಗುರುಸಿದ್ದಯ್ಯ ಅವರಿಗೆ ಸಿಟಿ ಕೋ ಆಪರೇಟಿವ್ ಬ್ಯಾಂಕಿನಲ್ಲಿ ಶ್ರದ್ಧಾಂಜಲಿ



ದಾವಣಗೆರೆ, ಆ. 22 - ನಿನ್ನೆ ನಿಧನರಾದ ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷ ಎನ್. ಜೆ. ಗುರುಸಿದ್ದಯ್ಯ ಅವರಿಗೆ ಬ್ಯಾಂಕಿನ ಉಪಾಧ್ಯಕ್ಷ ಎನ್. ಎಂ. ನಿರಂಜನ್ ನಿಶಾನಿಮಠ್ ಅವರ ಅಧ್ಯಕ್ಷತೆಯಲ್ಲಿ ಇಂದು ಶ್ರದ್ಧಾಂಜಲಿ ಸಲ್ಲಿಸಲಾಯಿತು. ಗುರುಸಿದ್ದಯ್ಯ ಅವರ ವ್ಯಕ್ತಿತ್ವ ಮತ್ತು ಸಾಮಾಜಿಕ ಸೇವೆಯನ್ನು ಮೆಲುಕು ಹಾಕಲಾಯಿತು.

ಸಭೆಯಲ್ಲಿ ಹಿರಿಯ ನಿರ್ದೇಶಕ ಕೆ. ಎಸ್. ಮಹೇಶ್ವರಪ್ಪ ಬಿ. ಹೆಚ್. ಪರಶುರಾಮಪ್ಪ, ಎನ್.ವಿ. ಬಂಡಿವಾಡ, ಡಾ. ಎಂ. ಸೋಮಶೇಖರಪ್ಪ, ಎಂ. ಎಸ್. ಸುಮಂತ್, ಸಿಬ್ಬಂದಿಯ ಪರವಾಗಿ ಶ್ರೀಮತಿ ಗೀತಾರಾಣಿ ಮತ್ತು ಬ್ಯಾಂಕಿನ ಮುಖ್ಯ ವ್ಯವಸ್ಥಾಪಕರು ಮಾತನಾಡಿದರು.

## ರಾಷ್ಟ್ರೀಯ ಕರಾಟೆಯಲ್ಲಿ ಬಹುಮಾನ



ದಾವಣಗೆರೆ, ಆ. 22- ಜಿಲ್ಲೆಯಲ್ಲಿ ನಡೆದ ರಾಷ್ಟ್ರೀಯ ಕರಾಟೆ ಪಂದ್ಯಾವಳಿಯಲ್ಲಿ ದಾವಣಗೆರೆ ಕ್ರೀಡಾ ಪಟುಗಳು ಭಾಗವಹಿಸಿದ್ದರು.

ಕ್ರೀಡಾ ಪಟುಗಳಾದ ಧನ್ವಿಕ್, ಭರತ್‌ಕುಮಾರ, ಮನ್ವಿತ, ಚರಣ್ ಕುಮಾರ, ಕೃತಿಕ್ ಪಾಟೀಲ್ ಪ್ರಥಮ ಸ್ಥಾನ, ಜೋಷ್ನಾ, ಚಿನ್ಮಯ, ಭುವನ್ ರಾಥೋಡ್ ದ್ವಿತೀಯ ಸ್ಥಾನ ಮತ್ತು ಸಂತೋಷ್, ಲಿಖಿತ್, ನವನೀತ್, ಆದ್ಯಾ, ದಾತ್ಯ ಮತ್ತು ಮನೋಜ್ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ತರಬೇತುದಾರರಾದ ಸಂಜಯ, ಸೋಮಶೇಖರ ಮತ್ತು ಗರುಡ ಕರಾಟೆ ಸಂಸ್ಥೆ ವತಿಯಿಂದ ಅಭಿನಂಧಿಸಿದ್ದಾರೆ.

## ಗುರು ರಾಯರ ಉತ್ತರಾರಾಧನೆ ಸಂಭ್ರಮ: ರಥೋತ್ಸವ

**(1ನೇ ಪುಟದಿಂದ)** ವಾಚಸ್ಪತಿ, ಸಿ.ಕೆ.ಆನಂತೀರ್ಥಾಚಾರ್, ಕಂಪ್ಲಿ ಪ್ರಹ್ಲಾದ್, ನರಗನಹಳ್ಳಿ ಶ್ರೀನಿವಾಸ್, ಪ್ರಹ್ಲಾದ್, ರಾಘವೇಂದ್ರ ಕುಲಕರ್ಣಿ ಸೇರಿದಂತೆ ಇತರರು ರಥೋತ್ಸವದಲ್ಲಿ ಭಾಗವಹಿಸಿದ್ದರು. ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.


## ಪಿ.ಎಂ. ಪ್ರಸನ್ನ ಕುಮಾರ್ ನಿಧನ



ದಾವಣಗೆರೆ ಸಿಟಿ ತರಳಬಾಳು ಬಡಾವಣೆ 12ನೇ ಕ್ರಾಸ್ ವಾಸಿ
ನಿವೃತ್ತ ಮುಖ್ಯೋಪಾಧ್ಯಾಯರಾದ ಪಿ. ಮಲ್ಲಪ್ಪ ಮತ್ತು
ದಿ|| ಪಾರ್ವತಮ್ಮ ಇವರ ದ್ವಿತೀಯ ಪುತ್ರ

**ಪಿ.ಎಂ. ಪ್ರಸನ್ನ ಕುಮಾರ್ (55)**

ಅವರು ದಿನಾಂಕ 22.08.2024ರ ಗುರುವಾರ ರಾತ್ರಿ 10 ಗಂಟೆಗೆ
ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಪತ್ನಿ, ಇಬ್ಬರು ಪುತ್ರರು, ಸಹೋದರ-ಸಹೋದರಿ ಹಾಗೂ
ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು
ದಿನಾಂಕ 23.08.2024ರ ಶುಕ್ರವಾರ ಸಂಜೆ 4 ಗಂಟೆಗೆ ಗ್ಲಾಸ್ ಹೌಸ್
ಪಕ್ಕದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**99803-17546, 94498-20972**


## ಹರಿಹರದಲ್ಲಿ ವಿಜೃಂಭಣೆಯ ರಾಯರ ಆರಾಧನಾ ಮಹೋತ್ಸವದ ರಥೋತ್ಸವ



ಹರಿಹರ, ಆ.22- ಇಲ್ಲಿನ ಶ್ರೀ ರಾಘವೇಂದ್ರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಗುರುವಾರ ರಾಯರ 356ನೇ ಆರಾಧನಾ ಮಹೋತ್ಸವದ ನಿಮಿತ್ತ ಮಹಾರಥೋತ್ಸವ ಶ್ರದ್ಧಾ ಭಕ್ತಿಯಿಂದ ಜರುಗಿತು.

ಗುರು ರಾಯರಿಗೆ ಬೆಳಗ್ಗೆಯಿಂದಲೇ ವಿಶೇಷ ಪೂಜಾಲಂಕಾರ ನಡೆದವು ಮತ್ತು ಸತ್ಯನಾರಾಯಣ ಪೂಜೆ ಮಾಡಲಾಯಿತು.

ಪಂಚಮಸಾಲಿ ಪೀಠಾಧ್ಯಕ್ಷ ವಚನಾನಂದ ಶ್ರೀಗಳು ರಥಕ್ಕೆ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಿದರು.

ರಾಯರ ನಾಮ ಸ್ಮರಣೆಯಲ್ಲಿ ಮೊಳಗಿದ್ದ ಭಕ್ತರು, ಜಯ ಘೋಷಗಳನ್ನು ಕೂಗುತ್ತಾ ರಥಕ್ಕೆ ಉತ್ತುತ್ತಿ, ಕಲ್ಲುಸಕ್ಕರೆ ಮತ್ತು ಬಾಳೆ ಹಣ್ಣು ಎಸೆಯುವ ಮೂಲಕ ಭಕ್ತಿ ಸಮರ್ಪಿಸಿದರು.

ದೇವಸ್ಥಾನದ ಆವರಣದಲ್ಲೇ ಜರುಗಿದ ರಥೋತ್ಸವದ ರಾಜ ನಡಿಗೆಯಲ್ಲಿ ಡೊಳ್ಳು, ಸಮಾಳ, ಭಜನೆ ಹಾಗೂ ಕೋಲಾಟವು ರಥೋತ್ಸವದ ಸೊಬಗನ್ನು ಇಮ್ಮಡಿಗೊಳಿಸಿದವು.

ಪತ್ರಕರ್ತರಾದ ಶಾಂಭವಿ ನಾಗರಾಜ್, ಶೇಖರಗೌಡ ಪಾಟೀಲ್, ಎಂ. ಚಿದಾನಂದ ಕಂಚಿಕೇರಿ, ಹೆಚ್.ಸಿ. ಕೀರ್ತಿ ಕುಮಾರ್, ಬಿ.ಎಂ. ಚಂದ್ರಶೇಖರ್, ಅಣ್ಣಪ್ಪ ಲಕ್ಕಶೆಟ್ಟಿಹಳ್ಳಿ ಅವರುಗಳನ್ನು ದೇವಸ್ಥಾನದ ಸಮಿತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

ದೇವಸ್ಥಾನದ ಪ್ರಧಾನ ಅರ್ಚಕ ವರಹಾಚಾರ್, ಸಮಿತಿಯ ಅಧ್ಯಕ್ಷ ಎ.ಬಿ. ಬಸವರಾಜ್, ಕಾರ್ಯದರ್ಶಿ ಸುಕುಮಾರ್, ಖಜಾಂಚಿ ಎಸ್. ರಂಗನಾಥ್, ನಿರ್ದೇಶಕ ಶ್ರೀಧರ್ ಶೆಟ್ಟಿ, ಮಂಜುನಾಥ್, ಪವನ್ ಆಚಾರ್, ಬಿಜೆಪಿಯ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಹೆಚ್.ಎಸ್ ರಾಘವೇಂದ್ರ, ಶ್ರೀನಿವಾಸ್ ಚಂದಾಪೂರ್, ಎ.ಬಿ. ವಿಶ್ವನಾಥ್, ಎ.ಬಿ. ಮಂಜುನಾಥ್, ಹಿಂದೂ ಜಾಗರಣ ವೇದಿಕೆಯ ದಿನೇಶ್, ಶಿವು, ಚಂದ್ರಕಾಂತ, ಡಾ. ಸಿಂದಗಿ, ಅಮರಾವತಿ ನಾಗರಾಜ್, ಮುನೀಂದ್ರ ಮತ್ತು ಭಕ್ತರು ರಥೋತ್ಸವದಲ್ಲಿದ್ದರು.

## ಯಾರಿಗೂ ಕೇರ್ ಮಾಡಲ್ಲ ಎಂದ ಡಿಕೆಶಿ

**(1ನೇ ಪುಟದಿಂದ)** ಆದರೂ ಬಿಡಬ್ಲ್ಯೂಎಸ್‌ಎಸ್‌ಬಿ ಕಷ್ಟಪಟ್ಟು ನಿರ್ವಹಣೆ ಮಾಡುತ್ತಿದೆ. ಯಾರು ಎಷ್ಟೇ ಆಕ್ಷೇಪ ವ್ಯಕ್ತಪಡಿಸಿದರೂ ನಾನು, ನನ್ನ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ ಎಂದು ಹೇಳಿದರು.

ರಾಜಧಾನಿಯ 1.40 ಕೋಟಿ ಜನಸಂಖ್ಯೆಗೆ ನೀರು ಒದಗಿಸಲೇಬೇಕು. ಇದಕ್ಕಾಗಿ ಸಾಲ ಮಾಡಿ, ಸಂಪರ್ಕ ಜಾಲ ಹೆಚ್ಚಿಸದೆ ಎಲ್ಲರಿಗೂ ನೀರು ಕೊಡಲು ಕಷ್ಟವಾಗುತ್ತದೆ. ದರ ಹೆಚ್ಚಳ ಮಾಡದಿದ್ದರೇ ನೀರು ಸರಬರಾಜು ಕಂಪನಿ ಉಳಿಯುವುದಿಲ್ಲ, ನೌಕರರು ಬದುಕಲು ಆಗುವುದಿಲ್ಲ.

ಸಂಸ್ಥೆಗೆ ವಿದ್ಯುತ್ ಬಿಲ್ ಕಟ್ಟಲು ಆಗುತ್ತಿಲ್ಲ, ನೌಕರರಿಗೆ ಸಂಬಳ ನೀಡಲು ಆಗುತ್ತಿಲ್ಲ. ಎಲ್ಲರಿಗೂ ನೀರಿನ ದರ ಹೆಚ್ಚಳ ಮಾಡುವುದಿಲ್ಲ, ಎಷ್ಟು ಏರಿಕೆ ಮಾಡಬೇಕು ಎಂಬುದನ್ನು ಇನ್ನೂ ನಿರ್ಧರಿಸಿಲ್ಲ, ಚರ್ಚೆ ಮಾಡಲಿ, ಧರಣಿ ಮಾಡಲಿ, ನಾನು ದರ ಹೆಚ್ಚಳಕ್ಕೆ ಬದ್ಧನಾದ್ದೇನೆ ಎಂದರು.

## ಅತ್ಯಾಚಾರ : ತನಿಖೆ ರೀತಿಗೆ ಸುಪ್ರೀಂ ತರಾಟೆ

**(1ನೇ ಪುಟದಿಂದ)** ರಾಷ್ಟ್ರೀಯ ಕಾರ್ಯ ಪಡೆಯು ಸಂಬಂಧಿಸಿದ ಎಲ್ಲರ ಜೊತೆ ಚರ್ಚಿಸಿ ವೈದ್ಯಕೀಯ ವೃತ್ತಿಪರರ ರಕ್ಷಣೆ ಕುರಿತು ರಾಷ್ಟ್ರೀಯ ಶಿಷ್ಟಾಚಾರ ರೂಪಿಸಲಿದೆ ಎಂದು ಪೀಠ ತಿಳಿಸಿದೆ. ಕೇಂದ್ರ ಆರೋಗ್ಯ ಸಚಿವಾಲಯವು ರಾಜ್ಯಗಳ ಆರೋಗ್ಯ ಮುಖ್ಯ ಕಾರ್ಯದರ್ಶಿಗಳು ಮತ್ತು ಪೊಲೀಸ್ ಮುಖ್ಯಸ್ಥರ ಜೊತೆ ಚರ್ಚೆ ನಡೆಸಬೇಕು, ಆರೋಗ್ಯ ವೃತ್ತಿಪರರ ಸುರಕ್ಷತೆ ಖಾತರಿಪಡಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಸಿಬಿಐ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ, ಘಟನೆಗೆ ಸಂಬಂಧಿಸಿದಂತೆ ಆಸ್ಪತ್ರೆ ಎಫ್‌ಐಆರ್ ದಾಖಲಿಸಿಲ್ಲ. ಸಂತ್ರಸ್ತೆಯ ತಂದೆ ತಾವೇ ಒತ್ತಾಯಿಸಿ ಎಫ್‌ಐಆರ್ ದಾಖಲಿಸಿದ್ದರು. ಅಂತ್ಯಕ್ರಿಯೆ ನೆರವೇರಿದ ನಂತರವೇ ಎಫ್‌ಐಆರ್ ದಾಖಲಿಸಲಾಗಿದೆ. ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಸಲಾಗಿತ್ತು. ನಾವು ಘಟನೆ ನಡೆದ ಐದು ದಿನದ ನಂತರ ತನಿಖೆಗೆ ಪ್ರವೇಶಿಸಿದ್ದೆವು, ಅಷ್ಟರಲ್ಲಿ ಎಲ್ಲವನ್ನು ಬದಲಿಸಲಾಗಿತ್ತು ಎಂದರು.

ಈ ಪ್ರಕರಣ ಆತ್ಮಹತ್ಯೆ ಎಂದು ಅಧಿಕಾರಿಗಳು ಮೊದಲು ಹೇಳಿದ್ದರು. ನಂತರವೇ ಅಸಹಜ ಸಾವು ಎಂದು ದಾಖಲಿಸಿಕೊಳ್ಳಲಾಯಿತು ಎಂದು ಮೆಹ್ತ ತಿಳಿಸಿದರು.

ಈ ಹಂತದಲ್ಲಿ ಮಾತನಾಡಿದ ಸುಪ್ರೀಂ ಕೋರ್ಟ್ ಪೀಠ, ಎಫ್‌ಐಆರ್ ದಾಖಲಿಸುವುದು ವಿಳಂಬವಾಗಿದ್ದು ಏಕೆ? ಯಾವ ಉದ್ದೇಶಕ್ಕಾಗಿ ವಿಳಂಬ ಮಾಡಲಾಯಿತು? ಈ ಬಗ್ಗೆ ಘಟನೆಯನ್ನು ಮೊದಲು ದಾಖಲಿಸಿದ ಕೋಲ್ಕೊತಾ ಪೊಲೀಸ್ ಅಧಿಕಾರಿ ಹಾಜರಾಗಿ ಮಾಹಿತಿ ನೀಡಬೇಕು ಎಂದು ತಿಳಿಸಿತು.

ಆಗಸ್ಟ್ 9ರಂದು ಅಸಹಜ ಸಾವಿನ ಪ್ರಕರಣ ದಾಖಲಿಸುವುದಕ್ಕೆ ಮೊದಲೇ ಮರಣೋತ್ತರ ಪರೀಕ್ಷೆ ನಡೆಸಿದ್ದು ಅಚ್ಚರಿ ತರುವಂತದ್ದಾಗಿದೆ. ಎಂದು ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರ ನೇತೃತ್ವದ ಪೀಠ ತಿಳಿಸಿತು. ಈ ಪೀಠದಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಹಾಗೂ ಮನೋಜ್ ಮಿಶ್ರ ಅವರಿದ್ದಾರೆ.

## ಹೊಸನಾಯಕನಹಳ್ಳಿಯಲ್ಲಿ ಇಂದು

ದಾವಣಗೆರೆ ತಾಲ್ಲೂಕು ಹೊಸನಾಯಕನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ದಾವಣಗೆರೆ ವಿವಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ವತಿಯಿಂದ ನಡೆಯುತ್ತಿರುವ 'ಸಮಾಜ ಕಾರ್ಯ ಗ್ರಾಮೀಣ ಶಿಬಿರ'ದ ಸಮಾರೋಪ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ಮುಖ್ಯ ಶಿಕ್ಷಕಿ ಜಿ.ಬಿ. ನಿರ್ಮಲ ಅಧ್ಯಕ್ಷತೆ ವಹಿಸುವರು. ದಾವಣಗೆರೆ ವಿವಿ ಕುಲಸಚಿವ (ಮೌಲ್ಯಮಾಪನ) ಪ್ರೊ.ಸಿ.ಕೆ. ರಮೇಶ ಸಮಾರೋಪ ಭಾಷಣ ಮಾಡಲಿದ್ದಾರೆ. ಪ್ರಾಧ್ಯಾಪಕ ಡಾ. ಬಿ.ಪಿ. ಶಿವಲಿಂಗಪ್ಪ ವರದಿ ಮಂಡಿಸುವರು. ಸಿಂಡಿಕೇಟ್ ಸದಸ್ಯೆ ಶಾರದ ಪಾಟೀಲ್ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಹೇಮಾವತಿ ರವಿಕುಮಾರ್, ಪ್ರೊ. ಎಸ್. ಸುಚಿತ್ರ, ಡಾ.ಎಂ.ಯು. ಲೋಕೇಶ್, ಸರಸ್ವತಿ ಸಂತೋಷ್ ಕುಮಾರ್, ಇಸ್ರತ್ ಜಹಾನ್, ಹೆಚ್.ಪಿ. ಹುಚ್ಚಂಗಪ್ಪ, ಡಾ.ಬಿ.ಎಸ್. ಪ್ರದೀಪ್, ಡಾ.ಪಟವರ್ಧನ್ ರಾಠೋಡ್, ಡಾ. ಕೆ. ತಿಪ್ಪೇಶ್, ಕೆ. ಎಸ್. ದಿನೇಶ್, ಎಸ್.ಟಿ. ಮಂಜುನಾಥ ಭಾಗವಹಿಸಲಿದ್ದಾರೆ.

## ಕಾಂಗ್ರೆಸ್ ಕಾರ್ಯದರ್ಶಿಯಾಗಿ ಇನಾಯತ್



ದಾವಣಗೆರೆ, ಆ. 22- ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಇನಾಯತ್ ಅಲಿಖಾನ್ ನೇಮಕಗೊಂಡಿದ್ದಾರೆ.

## ಕುಸ್ತಿ ಪಟುಗೆ ಭದ್ರತೆ ನೀಡಲು ಆದೇಶ

**(1ನೇ ಪುಟದಿಂದ)** ವಿಚಾರಣೆ ನಡೆಸಿದ ನ್ಯಾಯಾಲಯ, ಮಧ್ಯಂತರ ಕ್ರಮವಾಗಿ, ಈ ಪ್ರಕರಣದಲ್ಲಿ ಸಾಕ್ಷಿಯಾಗಿರುವ ಕುಸ್ತಿ ಪಟುವಿಗೆ ಭದ್ರತೆ ಮುಂದುವರೆಸಲು ಆದೇಶಿಸಿದೆ.

ಭದ್ರತೆಯನ್ನು ಯಾಕೆ ವಾಪಸ್ ಪಡೆಯಲಾಗಿದೆ ಎಂಬ ಬಗ್ಗೆ ಶುಕ್ರವಾರ ವರದಿ ನೀಡಬೇಕು ಎಂದು ನ್ಯಾಯಾಲಯ ಹೇಳಿದೆ.

## ಮುಷ್ಕರಕ್ಕೆ ತೆರೆ

**(1ನೇ ಪುಟದಿಂದ)** ನೀಡಿದ ನಂತರ ನಿರ್ಧಾರ ತೆಗೆದುಕೊಳ್ಳಲಾಗಿದೆ.

ವೈದ್ಯರು ಕರ್ತವ್ಯಕ್ಕೆ ಮರಳಬೇಕು, ಅವರು ಕರ್ತವ್ಯಕ್ಕೆ ಹಾಜಾರದಲ್ಲಿ ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿತ್ತು.

## ಜಿಗಳಿಯಲ್ಲಿ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್ ವಿತರಣೆ



ಮಲೇಬೆನ್ನೂರು, ಆ. 22 - ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಸರ್ಕಾರ ನೀಡಿದ ಉಚಿತ ಶೂ ಮತ್ತು ಸಾಕ್ಸ್‌ಗಳನ್ನು ಎಸ್‌ಡಿಎಂಸಿ ಪದಾಧಿಕಾರಿಗಳು ವಿತರಣೆ ಮಾಡಿದರು. ಎಸ್ ಡಿ ಎಂ ಸಿ ಅಧ್ಯಕ್ಷ ಗಂಗಾಧರ ಚಾರಿ, ಉಪಾಧ್ಯಕ್ಷೆ ಮಂಜುಳಾ ಮಾಲತೇಶ್, ಸದಸ್ಯರಾದ ಸುನೀತಾ ನಾಗರಾಜ್, ಬಿ ಪ್ರಭಾಕರ್, ಎಲ್ ಕೆ ಜಿ ಹಾಗೂ ಯು ಕೆ ಜಿ ಅಧ್ಯಕ್ಷ ಕೆ ಎಸ್ ಮಾಲತೇಶ್, ಶಾಲಾ ಮುಖ್ಯ ಶಿಕ್ಷಕ ನಾಗೇಶ್, ಶಿಕ್ಷಕರಾದ ಮಲ್ಲಿಕಾರ್ಜುನ್, ಲೋಕೇಶ್, ಗುಡ್ಡಪ್ಪ, ಶ್ರೀನಿವಾಸ್ ರೆಡ್ಡಿ, ಜಯಶ್ರೀ, ಶಿಲ್ಪಾ ಮತ್ತಿತರರು ಈ ವೇಳೆ ಹಾಜರಿದ್ದರು.

## ರಾಷ್ಟ್ರ ವಿರೋಧಿ ಹೇಳಿಕೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಕಾನೂನು ಪ್ರಕೋಷ್ಠ ಆಗ್ರಹ



ದಾವಣಗೆರೆ, ಆ.22- ಕಾಂಗ್ರೆಸ್ ಪಕ್ಷದ ವಿಧಾನ ಪರಿಷತ್ ಸದಸ್ಯ ಐವಾನ್ ಡಿಸೋಜಾ ನೀಡಿದ ರಾಷ್ಟ್ರ ವಿರೋಧಿ ಹಾಗೂ ಪ್ರಚೋದನಾತ್ಮಕ ಹೇಳಿಕೆಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಬಿಜೆಪಿ ಕಾನೂನು ಪ್ರಕೋಷ್ಠವು ಎಸ್ಪಿ ಉಮಾ ಪ್ರಶಾಂತ್ ಅವರಿಗೆ ದೂರು ಸಲ್ಲಿಸಿತು.

ಈ ವೇಳೆ ಮಾತನಾಡಿದ ಕಾನೂನು ಪ್ರಕೋಷ್ಠದ ಮುಖಂಡರು, ರಾಜ್ಯಪಾಲರು ಸಿದ್ದರಾಮಯ್ಯ ಅವರಿಗೆ ನೋಟಿಸ್ ನೀಡಿದ್ದನ್ನು ಖಂಡಿಸಿ ಮಂಗಳೂರಿನಲ್ಲಿ ನಡೆಸಿದ ಪ್ರತಿಭಟನೆಯಲ್ಲಿ ಐವಾನ್ ಡಿಸೋಜಾ ಅವರು ರಾಜ್ಯಪಾಲರನ್ನು ಕುರಿತು 'ಕೂಡಲೇ ಗವರ್ನರ್ ಹಿಂದಕ್ಕೆ ಹೋಗಬೇಕು. ಹೋಗದೇ ಇದ್ದರೆ, ಬಾಂಗ್ಲಾ ದೇಶದಲ್ಲಾದ ರೀತಿಯಲ್ಲಿ ಗವರ್ನರ್ ಕಚೇರಿಗೆ ಮಾಡಬೇಕಾಗುತ್ತದೆ ಎಂಬ ಹೇಳಿಕೆ ಖಂಡನೀಯ ಎಂದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಡಿಸಲು ಪಕ್ಷದ ಕಾರ್ಯಕರ್ತರಿಗೆ ಕುಮ್ಮಕ್ಕು ನೀಡುವ ರೀತಿಯಲ್ಲಿ ಪ್ರಚೋದನಾತ್ಮಕ ಹೇಳಿಕೆ ನೀಡಿ ರಾಜ್ಯಪಾಲರನ್ನು ಅವಮಾನಿಸಿದ್ದಾರೆ ಎಂದು ದೂರಿದರು.

ಸಚಿವರಾದ ಕೃಷ್ಣ ಭೈರೇಗೌಡ ಹಾಗೂ ಜಮೀರ್ ಅಹಮದ್ ರಾಜ್ಯಪಾಲರನ್ನು ನಿಂದಿಸುವ ಮೂಲಕ ಸಂವಿಧಾನಕ್ಕೆ ಅವಮಾನಿಸಿದ್ದಾರೆ. ಆದ್ದರಿಂದ ಈ ಮೂವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗುವಂತೆ ಒತ್ತಾಯಿಸಿದರು.

ಜಿಲ್ಲಾ ಸಂಚಾಲಕ ಹೆಚ್. ದಿವಾಕರ್, ರಾಜ್ಯ ಸಮಿತಿ ಸದಸ್ಯ ಎ.ಸಿ. ರಾಘವೇಂದ್ರ, ಯು.ಜಿ. ಪಾಟೀಲ್, ಅಜಯ್ ಇದ್ದರು.

# ಅಣೆಕಟ್ಟೆಯಲ್ಲಿ ಸಿಲುಕಿದ ಹಸು ರಕ್ಷಿಸಲು ತೆರಳಿದ ಮೂವರ ಸಾವು

ಭಿಂಡ್, ಆ. 22 - ಹಸು ರಕ್ಷಿಸಲು ಅಣೆಕಟ್ಟೆಗೆ ಜಿಗಿದ ರೈತನ ರಕ್ಷಣೆಗೆ ತೆರಳಿದ ರಾಜ್ಯ ವಿಪತ್ತು ನಿರ್ವಹಣಾ ಪಡೆಯ ಇಬ್ಬರು ಸಿಬ್ಬಂದಿ ಸಾವನ್ನಪ್ಪಿದ ಘಟನೆ ಮಧ್ಯಪ್ರದೇಶದ ಭಿಂಡ್ ಜಿಲ್ಲೆಯಲ್ಲಿ ನಡೆದಿದೆ.

ಬುಧವಾರದಂದು ಹಸು ಒಂದು ಕುನ್ವರಿ ನದಿಗೆ ಕಟ್ಟಲಾಗಿರುವ ಅಣೆಕಟ್ಟೆಯ ಗೇಟಿಗೆ ಸಿಲುಕಿತ್ತು. ಆಗ ಹಸುವಿನ ಮಾಲೀಕ ವಿಜಯ್ ಸಿಂಗ್ ಹಾಗೂ ಅವರ ಸಂಬಂಧಿ ದಿನೇಶ್ ಅವರು ಹಸು ರಕ್ಷಿಸಲು ನದಿಗೆ ಹಾರಿದರು.

ಉಭಯರು ರಭಸವಾಗಿ ಹರಿಯುತ್ತಿದ್ದ ನದಿ ನೀರಿಗೆ ಸಿಲುಕಿದರು. ಸ್ಥಳೀಯ ಗ್ರಾಮಸ್ಥರು ವಿಜಯ್ ಅವರನ್ನು ನೀರಿನಿಂದ ಹೊರಗೆಳೆದರು. ಅಷ್ಟರಲ್ಲಿ ಅವರು ಸಾವನ್ನಪ್ಪಿದ್ದರು.

ದಿನೇಶ್ ನದಿಯ ಮಧ್ಯದಲ್ಲಿರುವ ಪೊದೆಗಳಲ್ಲಿ ಸಿಲುಕಿದ್ದರು. ಆಗ ಗ್ರಾಮಸ್ಥರು ರಾಜ್ಯ ವಿಪತ್ತು ನಿರ್ವಹಣಾ ದಳಕ್ಕೆ ಮಾಹಿತಿ ನೀಡಿದರು. ವಿಪತ್ತು ದಳದ ಮೂವರು ಸಿಬ್ಬಂದಿ ರಕ್ಷಣೆಗಾಗಿ ದೋಣಿಯಲ್ಲಿ ತೆರಳಿದರು. ಆದರೆ ನೀರಿನ ಹರಿವಿಗೆ ಸಿಲುಕಿ ದೋಣಿ ಮಗುಚಿತು.

ವಿಪತ್ತು ದಳದ ಸಿಬ್ಬಂದಿಯಾದ ಪ್ರವೀಣ್ ಕುಶ್ವಾಹ ಹಾಗೂ ಹರ್ದಾಸ್ ಚೌಹಾಣ್ ಅವರ ಜೀವ ರಕ್ಷಕ ಉಡುಗೆ ನೀರಿನ ಹರಿವಿಗೆ ಸಿಕ್ಕಿ ಹರಿದು ಹೋಯಿತು. ಮೂರನೆಯವರು ಈಜಿ ದಡ ಸೇರುವಲ್ಲಿ ಯಶಸ್ವಿಯಾದರು.

ನಂತರ ನೂರಕ್ಕೂ ಹೆಚ್ಚು ಸಿಬ್ಬಂದಿ ಸ್ಥಳಕ್ಕೆ ತೆರಳಿ ಕುಶ್ವಾಹ ಹಾಗೂ ಚೌಹಾಣ್ ಮೃತದೇಹಗಳನ್ನು ಪತ್ತೆ ಮಾಡಿ ಹೊರಕ್ಕೆ ತಂದಿದ್ದಾರೆ. ಈ ನಡುವೆ, ದಿನೇಶ್ ಹಾಗೂ ಹಸುವನ್ನು ರಕ್ಷಿಸಲಾಗಿದೆ.

# ಶಾಲಾ ಶಿಕ್ಷಣ ಸುಧಾರಿಸಲು ಬಿಇಡಿ ಶಿಕ್ಷಣ ಅಭಿವೃದ್ಧಿಯಾಗಲಿ



ಬಿಇಎ ಶಿಕ್ಷಣ ಮಹಾವಿದ್ಯಾಲಯದ ಕಾರ್ಯಕ್ರಮದಲ್ಲಿ ಡಾ.ಎಚ್.ವಿ. ವಾಮದೇವಪ್ಪ

ದಾವಣಗೆರೆ, ಆ.22- ಶಾಲಾ ಶಿಕ್ಷಣದ ಗುಣಮಟ್ಟ ಸುಧಾರಿಸಲು ಬಿಇಡಿ ಮತ್ತು ಡಿಇಡಿ ಶಿಕ್ಷಣ ಅಭಿವೃದ್ಧಿಯಾಗಬೇಕು ಎಂದು ತರಳಬಾಳು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಡಾ.ಎಚ್.ವಿ. ವಾಮದೇವಪ್ಪ ತಿಳಿಸಿದರು.

ನಗರದ ಬಿಇಎ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶನಿವಾರ ಆಯೋಜಿಸಿದ್ದ ಡಾ.ಎಂ.ಸಿ. ಕೌಶಿಕ್ ಬರೆದಿರುವ ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಜ್ಞಾನ ಸಮಾಜ ನಿರ್ಮಿಸುವ ಉದ್ದೇಶವನ್ನು ಶಿಕ್ಷಣ ಹೊಂದಿದೆ. ಆದ್ದರಿಂದ ಶಿಕ್ಷಕರು ಬೋಧನಾ ವೃತ್ತಿಗೆ ಸೀಮಿತವಾಗದೇ, ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಜ್ಞಾನ ಅಭಿವೃದ್ಧಿಗೊಳಿಸಬೇಕು ಎಂದು ಹೇಳಿದರು.

ಶಿಕ್ಷಕರು ಸರಿಯಾದ ಕೌಶಲ್ಯ ಮನೋಭಾವ ವೃದ್ಧಿಸಿಕೊಳ್ಳದಿದ್ದರೆ, ಮಕ್ಕಳನ್ನು 21ನೇ ಶತಮಾನಕ್ಕೆ ಸಿದ್ಧಗೊಳಿಸಲು ವಿಫಲರಾಗುತ್ತೇವೆ ಎಂದು ಎಚ್ಚರಿಸಿದರು.

ಇಂದಿನ ಪರೀಕ್ಷಾ ಪದ್ಧತಿಯ ಶಿಕ್ಷಣದಿಂದ ಮಕ್ಕಳನ್ನು ಎಚ್ಚರಗೊಳಿಸಿ, ಮಕ್ಕಳಲ್ಲಿ ಹೊಸ ಜ್ಞಾನ ನೀಡಬೇಕಿದೆ. ಈ ನಿಟ್ಟಿನಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿ' 10 ಉದ್ದೇಶಗಳನ್ನು ಹೊಂದಿದೆ ಎಂದರು.

ವಿದ್ಯಾರ್ಥಿಗಳ ಜ್ಞಾನ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಪ್ರಶಿಕ್ಷಣಾರ್ಥಿಗಳು ಸಜ್ಜಾಗಬೇಕು. ಜತೆಗೆ ಸಂವಹನ ಸಾಮರ್ಥ್ಯ ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶಾಲಾ ಹಂತದಲ್ಲೆ ವಿದ್ಯಾರ್ಥಿಗಳಿಗೆ ಸಾಮಾಜಿಕ ಜವಾಬ್ದಾರಿ ಬಗ್ಗೆ ತಿಳಿಸಬೇಕು ಮತ್ತು ರಾಷ್ಟ್ರಕ್ಕೆ ಕೊಡುಗೆ ನೀಡುವ ನಿಟ್ಟಿನಲ್ಲಿ ಮಕ್ಕಳನ್ನು ಬೆಳೆಸಬೇಕು ಎಂದು ಹೇಳಿದರು.

ಶಿಕ್ಷಕರು ಹಾಗೂ ಪ್ರಶಿಕ್ಷಕರಿಗೆ ಉಪಯೋಗವಾಗುವ ಪುಸ್ತಕಗಳನ್ನು ಸರಳವಾದ ಭಾಷೆ ಹಾಗೂ ಉತ್ತಮ ನಿದರ್ಶನದೊಂದಿಗೆ ಡಾ. ಕೌಶಿಕ್ ಬರೆದಿದ್ದಾರೆ ಎಂದು ಪ್ರಶಂಸಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಎಚ್.ಕೆ. ಲಿಂಗರಾಜ್ ಮಾತನಾಡಿ, ಶಿಕ್ಷಣದಿಂದ ದೇಶದ ಪ್ರಗತಿ ಸಾಧ್ಯ. ಇಂದಿನ ಪ್ರಶಿಕ್ಷಣಾರ್ಥಿಗಳ ಕೈಯಲ್ಲಿ ಮುಂದಿನ ಪೀಳಿಗೆಯ ವಿದ್ಯಾರ್ಥಿಗಳ ಭವಿಷ್ಯವಿದೆ ಎಂದು ಹೇಳಿದರು.

ಅನಾರೋಗ್ಯ ಸಮಸ್ಯೆಯಿಂದ ಪುಸ್ತಕ ಬರೆದಿದ್ದೇನೆ. ನನ್ನಲ್ಲಿರುವ ಋಣಾತ್ಮಕ ಅಂಶವನ್ನು ಧನಾತ್ಮಕವಾಗಿ ಪರಿವರ್ತಿಸಿಕೊಂಡಿದ್ದರಿಂದ ಪುಸ್ತಕ ರಚಿಸಲು ಸಾಧ್ಯವಾಯಿತು ಎಂದು ಡಾ.ಎಂ.ಸಿ ಕೌಶಿಕ್ ಪ್ರಾಸ್ತಾವಿಕ ಮಾತನಾಡುತ್ತಾ ಭಾವುಕರಾದರು.

ಕಾಲೇಜಿನ ಪ್ರಭಾರಿ ಪ್ರಾಚಾರ್ಯ ಆರ್. ಎಲ್. ಶೈಲಜಾ, ನಿವೃತ್ತ ಪ್ರಾಚಾರ್ಯ ಎಸ್. ರಾಜಶೇಖರ್, ಡಾ.ಕೆ. ವೆಂಕಟೇಶ್, ಡಾ.ಕೆ. ಮುರುಗೇಶ್, ಎಸ್. ಚಂದ್ರೇಗೌಡ ಮತ್ತಿತರರು ಉಪಸ್ಥಿತರಿದ್ದರು.


# ಮೇಲ್ಛಾವಣಿ ಕಾಮಗಾರಿಗೆ ಬಸವರಾಜ್ ಪಟೇಲ್ ಚಾಲನೆ



ಹರಿಹರ, ಆ.22- ಇಲ್ಲಿನ ಕೇಶವ ನಗರದ ಪಾಟೀಲ್ ಬಡಾವಣೆಯ ಶ್ರೀ ಸಾಯಿಬಾಬಾ ಮಂದಿರದ ಸಭಾಂಗಣ ನಿರ್ಮಾಣದ ಮೇಲ್ಛಾವಣಿ ಕಾಮಗಾರಿಗೆ ಗುರುವಾರ ಗಂಗಮ್ಮ ಪಟೇಲ್ ಮಲ್ಲಪ್ಪ ಸೇವಾ ಟ್ರಸ್ಟಿನ ಅಧ್ಯಕ್ಷ ಜಿ. ಬಸವರಾಜ್ ಚಾಲನೆ ನೀಡಿದರು.

ಈ ವೇಳೆ ಸಮಿತಿಯ ಗೌರವಾಧ್ಯಕ್ಷ ಶಂಕರ್ ಖಟಾವ್ಕರ್, ಉಪಾಧ್ಯಕ್ಷ ಗುರುಪ್ರಸಾದ್, ಹನುಮಂತಪ್ಪ ಸುರ್ವೆ, ಕಾರ್ಯದರ್ಶಿ ವಾಗೀಶ್ ಪಟೇಲ್, ಖಜಾಂಚಿ ಜೆ.ಎಂ. ಲಿಂಗರಾಜ್, ಸಹ ಕಾರ್ಯದರ್ಶಿ ಚಂದ್ರಶೇಖರ್ ಸರಪದ್, ಪಿ.ಕೆ. ಸತೀಶ್ ಪಟೇಲ್, ಎನ್. ಪ್ರಕಾಶ್, ಶಶಿಧರ್ ಆನ್ವೇರಿ, ಡಿ. ಗೋಪಾಲ ರಾವ್, ಮಹಾದೇವಪ್ಪ ಸರಪದ್, ಜಿ.ಎಸ್. ಪ್ರಕಾಶ್, ಎಸ್.ಎಸ್. ಸಂಗನಾಳ ಮಠ್, ದೊರೆಸ್ವಾಮಿ, ಮಂಜುನಾಥ್, ಭೀಮಣ್ಣ ಐರಣಿ, ವೀರಪ್ಪ ನಿಂಗಪ್ಪ, ಆಂಜನಪ್ಪ, ಪ್ರಧಾನ ಅರ್ಚಕ ಕುಮಾರ್ ಸ್ವಾಮಿ ಹಿರೇಮಠ ಮತ್ತಿತರರಿದ್ದರು.

## ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ



ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 12 ರವರೆಗೆ ಹಾಗೂ ಹರಿಹರ ಸಮೀಪದ ಕೋಡಿಯಾಲ-ಹೊಸಪೇಟೆಯ ಪುಣ್ಯಕೋಟಿ ಮಠದಲ್ಲಿ ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676 - 91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.

# ಉಕ್ಕಡಗಾತ್ರಿಯಲ್ಲಿ ಇಂದು ನೂತನ ಕಟ್ಟಡಗಳ ಲೋಕಾರ್ಪಣೆ, ಸರ್ವಧರ್ಮ ಸಾಮೂಹಿಕ ವಿವಾಹ



ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಗದ್ದಿಗೆಯ ನೂತನ ಕಟ್ಟಡಗಳ ಲೋಕಾರ್ಪಣೆ ಮತ್ತು ಸರ್ವ ಧರ್ಮ ಸಾಮೂಹಿಕ ವಿವಾಹ ಮಹೋತ್ಸವವು ಇಂದು ನಡೆಯಲಿದೆ ಎಂದು ಗದ್ದಿಗೆ ಟ್ರಸ್ಟಿ ಕಮಿಟಿ ಕಾರ್ಯದರ್ಶಿ ಎಸ್. ಸುರೇಶ್ ತಿಳಿಸಿದ್ದಾರೆ.

ಬೆಳಗಿನ ಜಾವ ಶ್ರೀ ಸ್ವಾಮಿಯ ಕರ್ತೃ ಗದ್ದಿಗೆಗೆ ಮಹಾರುದ್ರಾಭಿಷೇಕ, ಬೆಳಿಗ್ಗೆ 8 ಗಂಟೆಗೆ ಶ್ರೀ ಸ್ವಾಮಿಗೆ ನೂತನವಾಗಿ ನಿರ್ಮಿಸಿರುವ ಬೆಳ್ಳಿ ಕೀರಿಟಧಾರಣೆ ಮತ್ತು ಪ್ರಭಾವಳಿ ಅರ್ಪಣೆ ಕಾರ್ಯಕ್ರಮವು ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಲಿದೆ.

ಬೆಳಿಗ್ಗೆ 8.30ಕ್ಕೆ ಬಸವ ತತ್ವ ಪ್ರವಚನ ಧಾರ್ಮಿಕ ಸಭೆಯ ನೇತೃತ್ವ ಶ್ರೀ ಜ್ಞಾನ ಪ್ರಭು ಸಿದ್ಧರಾಮ ದೇಶೀಕೇಂದ್ರ ಸ್ವಾಮೀಜಿ.

ದಿವ್ಯ ಸಾನ್ನಿಧ್ಯ : ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ. ಉದ್ಘಾಟನೆ : ಶ್ರೀ ಮೃತ್ಯುಂಜಯ ದೇಶೀಕೇಂದ್ರ ಸ್ವಾಮೀಜಿ. ಆಶೀರ್ವಚನ : ಡಾ. ಅಭಿನವ ಮಲ್ಲಿಕಾರ್ಜುನ ದೇಶೀಕೇಂದ್ರ ಸ್ವಾಮೀಜಿ, ಶ್ರೀ ಜಯ ಚಂದ್ರಶೇಖರ ಸ್ವಾಮೀಜಿ, ಶ್ರೀ ಶಿವಶಂಕರ ಶಿವಯೋಗಿ ಸ್ವಾಮೀಜಿ, ಶ್ರೀ ಶಿವಶಂಕರ ಶಿವ ಯೋಗಿ ಸ್ವಾಮೀಜಿ, ಶ್ರೀ ಪ್ರಭುಲಿಂಗ ಸ್ವಾಮೀಜಿ.

ಬಸವ ತತ್ವ ಪ್ರವಚನ : ಡಾ. ಮಾತೆ ಬಸವಾಂಜಲಿ ದೇವಿ ಬೆಳಿಗ್ಗೆ 10ಕ್ಕೆ ಸದ್ಭಾವನಾ ಮತ್ತು ಜನಜಾಗೃತಿ ಕಾರ್ಯಕ್ರಮದಲ್ಲಿ ಹೊಲಿಗೆ ತರಬೇತಿ ಕೇಂದ್ರ ಹಾಗೂ ಉಗ್ರಾಣ ಲೋಕಾರ್ಪಣೆ : ಶ್ರೀ ಸೋಮೇಶೇಖರ ಶಿವಾಚಾರ್ಯ ಸ್ವಾಮೀಜಿ.

ದಿವ್ಯ ನೇತೃತ್ವ : ಶ್ರೀ ಇಮ್ಮಡಿ ಕರಿಬಸವ ದೇಶೀಕೇಂದ್ರ ಸ್ವಾಮೀಜಿ.

ಕಾರ್ಯಕ್ರಮ ಉದ್ಘಾಟನೆ : ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಆಶೀರ್ವಚನ : ಶ್ರೀ ಚಂದ್ರಶೇಖರ ಸ್ವಾಮೀಜಿ, ಶ್ರೀ ವೇಮನಾನಂದ ಸ್ವಾಮೀಜಿ, ಶ್ರೀ ವೀರಭದ್ರ ಸ್ವಾಮೀಜಿ, ಶ್ರೀ ಬಾಲಯೋಗಿ ಜಗದೀಶ್ವರ ಸ್ವಾಮೀಜಿ, ಶ್ರೀ ಯೋಗಾನಂದ ಸ್ವಾಮೀಜಿ, ಯಲವಟ್ಟಿ.

ಬೆಳಿಗ್ಗೆ 11ಕ್ಕೆ ಸಾಮೂಹಿಕ ವಿವಾಹ ಹಾಗೂ ಗುರುವಂದನಾ ಕಾರ್ಯಕ್ರಮ : ದಿವ್ಯ ಸಾನ್ನಿಧ್ಯ : ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ.

ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಶ್ರೀ ಗುರು ಪರದೇಶೀಕೇಂದ್ರ ಸ್ವಾಮೀಜಿ, ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ, ಶ್ರೀ ವಚನಾನಂದ ಸ್ವಾಮೀಜಿ, ಶ್ರೀ ಮಾದಾರ ಚನ್ನಯ್ಯ ಸ್ವಾಮೀಜಿ. ಅಧ್ಯಕ್ಷತೆ : ಜಿ. ನಂದಿಗೌಡ್ರು. ಮುಖ್ಯ ಅತಿಥಿಗಳು : ಶಾಮನೂರು ಶಿವಶಂಕರಪ್ಪ, ಜೆ.ಸಿ. ಮಾಧುಸ್ವಾಮಿ, ಡಾ. ಪ್ರಭಾ ಮಲ್ಲಿಕಾರ್ಜುನ್, ಜಿ.ಎಂ. ಸಿದ್ದೇಶ್ವರ, ಬಿ.ಪಿ. ಹರೀಶ್, ಹೆಚ್.ಎಸ್.ಶಿವಶಂಕರ್, ಎಸ್.ಜಯ್ಯಪ್ಪ, ನಂದಿಗುಡಿ ಶ್ರೀನಿವಾಸ್, ಚಂದ್ರಶೇಖರ್ ಪೂಜಾರ್ ಮತ್ತಿತರರು.


# ವೀರಶೈವ ಮಹಾಸಭಾ : 25ಕ್ಕೆ ಸಾಮಾನ್ಯ ಸ್ಥಾನಗಳಿಗೆ ಚುನಾವಣೆ

ದಾವಣಗೆರೆ, ಆ.22- ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯ ಕಾರ್ಯನಿರ್ವಾಹಕ ಸಮಿತಿ ಸಾಮಾನ್ಯ ಸದಸ್ಯ ಸ್ಥಾನಗಳಿಗೆ ದಾವಣಗೆರೆ ಜಿಲ್ಲೆಯಲ್ಲಿ ನಡೆಯುವ ಚುನಾವಣೆಯ ವೇಳಾ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಮಾಹಿತಿಗಾಗಿ ಚುನಾವಣಾಧಿಕಾರಿ ಪ್ರೊ.ವೈ. ವೃಷಭೇಂದ್ರಪ್ಪ ಅವರನ್ನು ಕಚೇರಿ ಸಮಯ ಬೆಳಗ್ಗೆ 10ರಿಂದ ಸಂಜೆ 4ರ ಅವಧಿಯಲ್ಲಿ ಸಂಪರ್ಕಿಸಲು ಸೂಚಿಸಿದ್ದಾರೆ.

2ನೇ ಹಂತದ ಚುನಾವಣೆ ರಾಜ್ಯ ಘಟಕದ ಕಾರ್ಯ ನಿರ್ವಾಹಕ ಸಮಿತಿ ಸಾಮಾನ್ಯ ಸದಸ್ಯರ ಸ್ಥಾನಗಳಿಗೆ ಇದೇ ದಿನಾಂಕ 25ರಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 5ರ ವರೆಗೆ ನಗರದ ಎವಿ ಕಮಲಮ್ಮ ಮಹಿಳಾ ಕಾಲೇಜಿನಲ್ಲಿ ಮತದಾನ ನಡೆಯಲಿದೆ ಎಂದು ತಿಳಿಸಿದ್ದಾರೆ.

## ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಪ್ರಥಮ : ವಿಕಾಸ್‌ಗೆ ಚಿನ್ನದ ಪದಕ



ದಾವಣಗೆರೆ, ಆ. 22 - ಮೈಸೂರಿನಲ್ಲಿ ಮೊನ್ನೆ ನಡೆದ ರಾಜ್ಯಮಟ್ಟದ ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ನಗರದ ಚಾಣಕ್ಯ ಕಲಾ ಮತ್ತು ವಾಣಿಜ್ಯ ಮಹಾ ವಿದ್ಯಾಲಯದ ವಿದ್ಯಾರ್ಥಿ ವಿಕಾಸ್ 89 ಕೆ.ಜಿ. ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿ ಚಿನ್ನದ ಪದಕ ವಿಜೇತರಾಗಿದ್ದಾರೆ ಎಂದು ಚಾಣಕ್ಯ ಪ್ರಥಮ ದರ್ಜೆ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯರು ತಿಳಿಸಿದ್ದಾರೆ.

## ಇಂದು ತುಂಗಭದ್ರಾ ನದಿಗೆ ಬಾಗಿನ

ಹರಿಹರ : ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಮಹಿಳಾ ಘಟಕದಿಂದ ಇಂದು ತುಂಗಭದ್ರಾ ನದಿಗೆ ಬಾಗಿನ ಅರ್ಪಿಸಲಾಗುವುದು. ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ನೇತೃತ್ವದಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಶ್ರೀ ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ ಹಾಗೂ ಪಂಚಮಸಾಲಿ ಸಮಾಜದ ಹಿರಿಯರು, ಮುಖಂಡರು ಪಾಲ್ಗೊಳ್ಳಲಿದ್ದಾರೆಂದು ಶ್ರೀ ಪೀಠದ ಆಡಳಿತಾಧಿಕಾರಿ ಡಾ.ರಾಜಕುಮಾರ್ ತಿಳಿಸಿದ್ದಾರೆ.

# ಜೆ.ಎಸ್.ಡಬ್ಲ್ಯೂ.ಗೆ 3,667 ಎಕರೆ ಜಮೀನು ಮಾರುವ ಒಪ್ಪಂದ ಜಾರಿ

ಬೆಂಗಳೂರು, ಆ. 22 - ಬಳ್ಳಾರಿ ಜಿಲ್ಲೆಯಲ್ಲಿ ಜೆ.ಎಸ್.ಡಬ್ಲ್ಯೂ. ಸ್ಟೀಲ್ ಕಂಪನಿಗೆ 3,667 ಎಕರೆ ಜಮೀನು ಮಾರಾಟ ಮಾಡುವ ಒಪ್ಪಂದ ಜಾರಿಗೆ ತರಲು ರಾಜ್ಯ ಸಂಪುಟ ತೀರ್ಮಾನಿಸಿದೆ.

ಸಂಪುಟ ಸಭೆಯ ನಂತರ ಈ ಬಗ್ಗೆ ಮಾತನಾಡಿ ರುವ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ. ಪಾಟೀಲ್, ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತೋರಣಗಲ್ಲು ಮತ್ತು ಕುರೇಕುಪ್ಪ ಗ್ರಾಮಗಳಲ್ಲಿನ 2 ಸಾವಿರ ಎಕಕರೆ ಜಮೀನನ್ನು ಪ್ರತಿ ಎಕರೆಗೆ 1.22 ಲಕ್ಷ ರೂ. ಅಂತಿಮ ಬೆಲೆ ನಿಗದಿಪಡಿಸಿ ಹಾಗೂ ಸಂಡೂರು ತಾಲ್ಲೂಕಿನ ತೋರಗಣಲ್ಲು, ಮುಸೇನಾಯಕನಹಳ್ಳಿ ಮತ್ತು ಯರಬನಹಳ್ಳಿ ಗ್ರಾಮಗಳಲ್ಲಿನ 1666.73 ಎಕರೆ ಜಮೀನನ್ನು ಪ್ರತಿ ಎಕರೆಗೆ 1.50 ಲಕ್ಷ ರೂ. ಅಂತಿಮ ಬೆಲೆ ನಿಗದಿಪಡಿಸಿ ನೀಡಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ಕಂಪನಿಗೆ ಜಮೀನು ಮಾರುವ ಪ್ರಸ್ತಾಪ ಈ ಹಿಂದೆ ವಿವಾದಕ್ಕೆ ಸಿಲುಕಿತ್ತು. ನಂತರ ಕಂಪನಿ ನ್ಯಾಯಾಲಯದ ಮೊರೆ ಹೋಗಿತ್ತು. ಕಾನೂನು ಅನಿವಾರ್ಯತೆಗಳ ಕಾರಣ ದಿಂದಾಗಿ ಜಮೀನು ಮಾರುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸಚಿವ ಪಾಟೀಲ್ ತಿಳಿಸಿದರು.

2005ರಲ್ಲಿ ಧರಂ ಸಿಂಗ್ ಅವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಗುತ್ತಿಗೆ ಹಾಗೂ ಮಾರಾಟದ ಆಧಾರದ ಮೇಲೆ ಕಂಪನಿಗೆ 2000.58 ಎಕರೆ ಜಮೀನು ನೀಡಲು ನಿರ್ಧರಿಸಲಾಗಿತ್ತು.

ನಂತರ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದಾಗ ಈ ಬಗ್ಗೆ ಆದೇಶ ಹೊರಡಿಸಲಾಗಿತ್ತು. 2007ರಲ್ಲಿ ಮತ್ತೆ 1666 ಎಕರೆ ಜಮೀನು ನೀಡಲಾಗಿತ್ತು. ಆದರೆ ನಂತರದಲ್ಲಿ ಈ ಪ್ರಸ್ತಾಪ ವಿವಾದಕ್ಕೆ ಸಿಲುಕಿತ್ತು.

ಕಾಂಗ್ರೆಸ್ ಹಾಗೂ ಜೆಡಿಎಸ್ ಮೈತ್ರಿ ಸರ್ಕಾರ ಕಂಪನಿಗೆ ಜಮೀನನ್ನು ಚಿಲ್ಲರೆ ಬೆಲೆಗೆ ಮಾರಾಟ ಮಾಡಿದೆ ಎಂದು ಆಗ ಪ್ರತಿಪಕ್ಷವಾಗಿದ್ದ ಬಿಜೆಪಿ ಆರೋಪಿಸಿತ್ತು. ಸದನದಲ್ಲಿ ಈ ಬಗ್ಗೆ ಪ್ರತಿಭಟನೆ ನಡೆಸಿತ್ತು. ಈ ವ್ಯವಹಾರದಲ್ಲಿ ಕಿಕ್ ಬ್ಯಾಕ್ ನಡೆದಿದೆ ಎಂದು ಆರೋಪಿಸಲಾಗಿತ್ತು.

ನಂತರ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗ, 2020ರಲ್ಲಿ ಜಮೀನು ವ್ಯವಹಾರದ ಬಗ್ಗೆ ಪರಿಶೀಲಿಸಲು ಸಂಪುಟ ಉಪಸಮಿತಿ ರಚಿಸಲಾಗಿತ್ತು. 2021 ರಲ್ಲಿ ಜಮೀನು ಮಾರಲು ಸಂಪುಟ ಒಪ್ಪಿಗೆ ನೀಡಿತ್ತು. ಆದರೆ ಮತ್ತೆ ವಿರೋಧ ವ್ಯಕ್ತವಾಗಿ ಪ್ರಸ್ತಾಪ ತಡೆಯಲಾಗಿತ್ತು.

## ಲೋಕಾಯುಕ್ತರ ಎದುರು ಡಿಕೆಶಿ ಹಾಜರಿ

ಬೆಂಗಳೂರು, ಆ. 22 - ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಲೋಕಾಯುಕ್ತರ ಎದುರು ವಿಚಾರಣೆಗೆ ಹಾಜರಾಗಿದ್ದಾರೆ.

ಶಿವಕುಮಾರ್ ವಿರುದ್ಧ ಲೋಕಾಯುಕ್ತ ಪೊಲೀಸರು ಕಳೆದ ಫೆಬ್ರವರಿಯಲ್ಲಿ ಪ್ರಕರಣ ದಾಖಲಿಸಿದ್ದರು.

ಶಿವಕುಮಾರ್ ವಿರುದ್ಧದ ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಸಿ.ಬಿ.ಐ.ಗೆ ನೀಡಲಾಗಿದ್ದ ಅನುಮತಿ ವಾಪಸ್ ಪಡೆಯಲಾಗಿತ್ತು. ನಂತರ ರಾಜ್ಯ ಸರ್ಕಾರ ಈ ಪ್ರಕರಣವನ್ನು ಲೋಕಾಯುಕ್ತ ವಿಚಾರಣೆಗೆ ವಹಿಸಿತ್ತು.

# ಪ್ರವಾಸೋದ್ಯಮ ಮೇಲ್ದರ್ಜೆಗೇರಿಸಲು ಪ್ರವಾಸಿ ತಾಣ ಆಯ್ಕೆ ಮಾಡಿ, ವೋಟ್ ಮಾಡಿ

ದಾವಣಗೆರೆ, ಆ.22- ಪ್ರವಾಸೋದ್ಯಮವನ್ನು ಮೇಲ್ದರ್ಜೆಗೇರಿಸಲು ಹಾಗೂ ಎಲ್ಲಾ ವರ್ಗಗಳ ಅಂದರೆ ಧಾರ್ಮಿಕ, ಸಾಂಸ್ಕೃತಿಕ, ಪಾರಂಪರಿಕ, ನೈಸರ್ಗಿಕ ಹಾಗೂ ವನ್ಯಜೀವಿ ಮತ್ತು ಸಾಹಸ ಚಟುವಟಿಕೆಗಳು ಹಾಗೂ ಇತರೆ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ದೃಷ್ಟಿಕೋನದಲ್ಲಿ ಪ್ರಮುಖ ಪ್ರವಾಸಿ ತಾಣ ಗುರುತಿಸಿ, ವಿಶ್ವ ದರ್ಜೆಯಲ್ಲಿ ಅಭಿವೃದ್ಧಿಗೆ ದೇಕೋ ಅಪನಾ ದೇಶ್ ಜನರ ಆಯ್ಕೆ-2024ರ ಕಾರ್ಯಕ್ರಮ ಪ್ರಾರಂಭಿಸಲಾಗಿದೆ.

ಕಾರ್ಯಕ್ರಮದ ಭಾಗವಾಗಿ ನಾಗರಿಕರು, ಪ್ರವಾಸಿಗರು ಆದ್ಯತಾ ಪ್ರವಾಸಿ ತಾಣ ಆಯ್ಕೆ ಮಾಡಲು Mygov ವೇದಿಕೆಯಡಿ ವೆಬ್‌ಲಿಂಕ್- https://innovateindia.mygov.in/dekho-apna-desh/ ಲಾಗಿನ್‌ನಲ್ಲಿ ನಾಗರಿಕರು, ಪ್ರವಾಸಿಗರು ಆದ್ಯತೆಯ ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಲು 15ನೇ ಸೆಪ್ಟೆಂಬರ್ 2024ರ ವರೆಗೆ ವೋಟ್ ಮಾಡುವ ಅವಕಾಶ ನೀಡಲಾಗಿದೆ. ಆಯ್ಕೆ ಮಾಡಿದ ನಂತರ ಆನ್‌ಲೈನ್‌ನಲ್ಲೇ ಪ್ರಶಂಸನಾ ಪ್ರಮಾಣ ಪತ್ರ ಪಡೆಯಬಹುದು.

ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಹರಿಹರೇಶ್ವರ ದೇವಸ್ಥಾನ, ಕೊಂಡಜ್ಜಿ ಕೆರೆ, ಕುಂದುವಾಡ ಕೆರೆ, ಇಂದಿರಾ ಪ್ರಿಯಾದರ್ಶಿನಿ ಪ್ರಾಣಿ ಸಂಗ್ರಹಾಲಯ, ಕಣ್ವಕುಪ್ಪೆ ಕೋಟೆ, ಚನ್ನಗಿರಿ ಕೋಟೆ, ಮದಕರಿ ನಾಯಕ ಸಮಾಧಿ ಸ್ಥಳ, ಮಾಯಕೊಂಡ ಪ್ರವಾಸಿ ತಾಣಗಳನ್ನು ಆಯ್ಕೆಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಹೀಗಾಗಿ ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಿ, ವೋಟ್ ಮಾಡುವಂತೆ ದಾವಣಗೆರೆ ಜನತೆಗೆ ಕೋರಲಾಗಿದೆ.

ಮಾಹಿತಿಗಾಗಿ ದೂ.ಸಂ: 08192-230123 ಸಂಪರ್ಕಿಸಲು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

# ಮಹಾರಾಷ್ಟ್ರ ಬಾಲಕಿಯರ ಪೀಡನೆ : ಎಫ್.ಐ.ಆರ್. ವಿಳಂಬಕ್ಕೆ ಹೈಕೋರ್ಟ್ ತರಾಟೆ

ಮುಂಬೈ, ಆ. 22 - ಮಹಾರಾಷ್ಟ್ರದ ಬದ್ಲಾಪುರದಲ್ಲಿ ಇಬ್ಬರು ಎಲ್.ಕೆ.ಜಿ. ಬಾಲಕಿಯರ ಮೇಲೆ ನಡೆದ ಲೈಂಗಿಕ ಹಲ್ಲೆಗೆ ಸಂಬಂಧಿಸಿದಂತೆ ಎಫ್.ಐ.ಆರ್. ದಾಖಲಿಸಿಕೊಳ್ಳುವುದನ್ನು ವಿಳಂಬ ಮಾಡಿದ ಪೊಲೀಸರನ್ನು ಬಾಂಬೆ ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ಈ ಪ್ರಕರಣದ ಬಗ್ಗೆ ಸ್ವಯಂ ಪ್ರೇರಿತ ವಿಚಾರಣೆ ನಡೆಸಿದ ಹೈಕೋರ್ಟ್, ಶಾಲೆಯ ಅಧಿಕಾರಿಗಳು ಪ್ರಕರಣ ದಾಖಲಿಸಲು ವಿಫಲರಾಗಿದ್ದಾರೆ. ಪೊಲೀಸರು ಈ ಬಗ್ಗೆ ಎಫ್.ಐ.ಆರ್. ದಾಖಲಿಸುವುದನ್ನು ತಡ ಮಾಡಿದ್ದಾರೆ ಎಂದು ಹೇಳಿದೆ.

ಆಗಸ್ಟ್ 12 ಹಾಗೂ 13ರಂದು ಶಾಲೆಯ ಉದ್ಯೋಗಿಯೋರ್ವ ಮಕ್ಕಳನ್ನು ಲೈಂಗಿಕವಾಗಿ ಪೀಡಿಸಿದ್ದ. ಆಗಸ್ಟ್ 16ರಂದು ಎಫ್.ಐ.ಆರ್. ದಾಖಲಿಸಲಾಗಿತ್ತು. ಮರು ದಿನ ಆರೋಪಿಯನ್ನು ಬಂಧಿಸಲಾಗಿತ್ತು.

# ಜೀವನ ಪರ್ಯಂತ ಬಸವ ತತ್ವ ಅಳವಡಿಸಿಕೊಂಡಿದ್ದ ಲಿಂ. ಸಿದ್ದರಾಮಣ್ಣ



ದಾವಣಗೆರೆ, ಆ. 22 - ಲಿಂ. ಶರಣ ವಿ. ಸಿದ್ದರಾಮಣ್ಣನವರು ಬದುಕಿನ ಅಂತಿಮ ದಿನಗಳವರೆಗೂ ಅಪ್ಪಟ ಬಸವ ತತ್ವವನ್ನು ಹೊಂದಿದ್ದರು ಎಂದು ರೇಖಾ ಮಹಾರುದ್ರಪ್ಪ ಹೇಳಿದರು.

ನಗರದ ಆಶಾಕಿರಣ ವಿಶೇಷ ಮಕ್ಕಳ ಶಾಲಾ ಆವರಣದ ಸಭಾಂಗಣದಲ್ಲಿ ಈಚೆಗೆ ಏರ್ಪಡಿಸಿದ್ದ ಶತಾಯುಷಿ ಲಿಂ. ವಿ. ಸಿದ್ದರಾಮಣ್ಣ ಶರಣರಿಗೆ ನುಡಿನಮನ ಮತ್ತು ವಿಶೇಷ ಮಕ್ಕಳ ಮನೋವಿಕಾಸಕ್ಕಾಗಿ ಅನುಭಾವಿಗಳಿಂದ ಜ್ಞಾನ ದಾಸೋಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಾರುದ್ರಪ್ಪ ಹಾಗೂ ಅವರ ಪತ್ನಿ ರೇಖಾ ಮಹಾರುದ್ರಪ್ಪ ಸಿದ್ದರಾಮಣ್ಣನವರ ಸೇವೆಯನ್ನು ದಶಕಗಳ ಕಾಲ ಮಾಡುತ್ತಾ ಬಂದಿದ್ದು, ಬಾಲ್ಯ ಜೀವನದಿಂದ ಅವರ ಬದುಕಿನ ಅಂತಿಮ ದಿನಗಳ ವರೆಗೆ ಅವರಲ್ಲಿದ್ದ ಬಸವ ನಿಷ್ಠೆಯನ್ನು ಕುರಿತು ಹೇಳಿದರು. ಶರಣರು ಸ್ವತಃ ವಚನಗಳನ್ನು ರಚಿಸುತ್ತಿದ್ದರು. ನಾಟಕ, ರೂಪಕಗಳನ್ನು ಹಾಗೂ ವಚನಗಳಿಗೆ ರಾಗ ಸಂಯೋಜನೆಯನ್ನು ಮಾಡುತ್ತಿದ್ದರು. ಅಪ್ಪಟ ಬಸವ ತತ್ವವನ್ನು ತಮ್ಮ ಜೀವನದುದ್ದಕ್ಕೂ ಅಳವಡಿಸಿಕೊಂಡಿದ್ದರು ಎಂದರು.

ಶ್ರೀ ಬಸವಲಿಂಗ ಮೂರ್ತಿ ಸ್ವಾಮೀಜಿ ಮಾತನಾಡಿ, ಸಿದ್ದರಾಮಣ್ಣ ಅವರು ಅಂಧ, ಅನಾಥ, ವಿಶೇಷ ಮಕ್ಕಳಲ್ಲಿ ದೇವರನ್ನು ಕಾಣುತ್ತಿದ್ದರು. ಮಕ್ಕಳಲ್ಲಿ ಮಕ್ಕಳಾಗಿ ಬೆರೆತು, ಶರಣ ತತ್ವದ ಚಿಂತನೆಗಳನ್ನು ಮಕ್ಕಳಲ್ಲಿ ತುಂಬುತ್ತಿದ್ದರು. ಈ ಮೂಲಕ ಮಕ್ಕಳ ಮನೋವಿಕಾಸಗೊಳಿಸಿ ಜ್ಞಾನ ಉಣಬಡಿಸುತ್ತಿದ್ದರು ಎಂದು ತಿಳಿಸಿದರು.

ಆವರಗೆರೆ ರುದ್ರಮುನಿ, ಎಂ.ಎಸ್. ಮಂಜುನಾಥ್, ದೇವಿಗೆರೆ ಗಿರೀಶಣ್ಣ, ಸಂಗಪ್ಪ ತೋಟದ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


**ಚಿತ್ರದುರ್ಗದಲ್ಲಿ ವಾಸದ ಮನೆ ಮತ್ತು ನರ್ಸರಿ ಶಾಲೆ ಮಾರಾಟಕ್ಕಿದೆ**

ಚಿತ್ರದುರ್ಗದ ಬ್ಯಾಂಕ್ ಕಾಲೋನಿಗೆ ಲಗತ್ತಾಗಿರುವ ಸಾಮ್ರಾಜ್ಯ ಎಕ್ಸ್‌ಟೆನ್ಷನ್‌ನಲ್ಲಿ ಸ್ವಂತಕ್ಕೆ, ಉತ್ತರಾಭಿಮುಖ ಇರುವ ಸಂಪೂರ್ಣ ವಾಸ್ತು ಪ್ರಕಾರ ಕಟ್ಟಿಸಿರುವ ಮುಂದೆ 30 ಅಡಿ ರಸ್ತೆ, ಹಿಂದೆ 60 ಅಡಿ ರಸ್ತೆ, ಇರುವ 60x90 Sfqt ಅಳತೆಯ ಅಂದಾಜು 5400 ಅಡಿ ಇರುವ ಸೈಟಿನಲ್ಲಿ 4 ಬೆಡ್ ರೂಂನ ಡ್ಯೂಪ್ಲೆಕ್ಸ್, ಹಾಲಿ ವಾಸವಿರುವ ವಾಸದ 4 ವರ್ಷದ ಮನೆ ಮಾರಾಟಕ್ಕಿದೆ ಮತ್ತು ಲಗತ್ತಾಗಿ 120x80 ಅಂದಾಜು 9000 ಅಡಿ ಇರುವ ಸೈಟ್‌ನಲ್ಲಿ ಹಾಲಿ ನರ್ಸರಿ ಶಾಲೆ ಇರುವ ಆಸ್ತಿ ವಾಸದ ಮನೆ ಮತ್ತು ನರ್ಸರಿ ಶಾಲೆ ಬೇರೆ ಬೇರೆಯಾಗಿ ಮಾರಾಟಕ್ಕಿದೆ.

ಸಂಪರ್ಕಿಸಿ : ಮಧು - 94481 80019, 98447 11299, 87926 74819

**MATRUCHAYA HEALTH CARE**
(Mother & child care Hospital)
2nd cross siddaveerappa Layout, Shamanuru Road, Dvg
HOSPITAL STAFF VACANCY
1) Senior Nurses (GNM) - 4
2) Junior Nurses (GNM) - 4
3) OT Nurses - 2 , 4) Pharmacist - 2
5) Receptionist - 1
Attractive Salary based on Eligibility & Exp.
Apply with Biodata, Degree Certificate & Addr. Proof.
Accomadation Available
Conact no. 78298 08443, 97427 62462


**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ದಾವಣಗೆರೆ.**

**ಕಾಮ್. ಓ.ಎಸ್.ನಂ. 13/2024**

ವಾದಿ : ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಸ್. ನಿಜಲಿಂಗಪ್ಪ ಬಡಾವಣೆ ಬ್ರಾಂಚ್, ದಾವಣಗೆರೆ. ವಿರುದ್ಧ /- ಪ್ರತಿವಾದಿ : ಮೆ॥ ಫ್ಯಾಷನ್ ಪಾಯಿಂಟ್, ಪ್ರೊ. ಶ್ರೀ ಸಂತೋಷ ಬಿನ್ ಅಡಿವೆಪ್ಪ, ವಯಸ್ಸು ಸುಮಾರು 40 ವರ್ಷ, ವಾಸ : # 680/-4, ಪಿಸಾಳೆ ಬಿಲ್ಡಿಂಗ್, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-577 002.

**ಕೋರ್ಟ್ ಸಮನ್ಸ್ ಆರ್ಡರ್ 5 ನಿಯಮ 20 (1ಎ) ಸಿಪಿಸಿ ಪ್ರಕಾರ**

ವಾದಿ ಬ್ಯಾಂಕ್‌ನ ಮ್ಯಾನೇಜರ್ ರವರು ಪ್ರತಿವಾದಿಯಾದ ಮೆ॥ ಫ್ಯಾಷನ್ ಪಾಯಿಂಟ್ ಮಾಲೀಕರಾದ ಶ್ರೀ ಸಂತೋಷ ಇವರ ಮೇಲೆ ರೂ. 10,42,922/-ಗಳ ಅಸಲು ಮತ್ತು ಬಡ್ಡಿ ಹಣದ ವಸೂಲಾತಿಗೆ ಈ ಮೇಲ್ಕಂಡ ನ್ಯಾಯಾಲಯದಲ್ಲಿ ದಾವಾ ಮಾಡಿದ್ದು ಕೋರ್ಟ್ ಸಮನ್ಸ್ ವಾಪಸ್ಸು ಬಂದಿರುತ್ತದೆ. ಆದ ಕಾರಣ ನಿಮಗೆ ಸದರಿ ನೋಟೀಸಿನ ಮೂಲಕ ತಿಳಿಸುವುದೇನೆಂದರೆ, ದಿನಾಂಕ : 25.09.2024 ರಂದು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದು ಹಾಜರಾಗಲು ಅಥವಾ ತಮ್ಮ ವಕೀಲರ ಮೂಲಕ ಹಾಜರಾಗಿ ನಿಮ್ಮ ಅಹವಾಲು ಇದ್ದರೆ ತಕರಾರು ಮೂಲಕ ಸಲ್ಲಿಸಿ ಸದರಿ ದಾವಾವನ್ನು ನಡೆಸಲು ಈ ಮೂಲಕ ತಿಳಿಸಲಾಗಿದೆ. ಮಾನ್ಯ ಘನ ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕ : 22.08.2024 ಕೋರ್ಟಿನ ಮೊಹರಿನೊಂದಿಗೆ.

ವಾದಿ ಬ್ಯಾಂಕಿನ ಪರ ವಕೀಲರು
ಸಹಿ/- ಎಸ್.ಆರ್. ಚಂದ್ರಶೇಖರ್
99454 99376

ಸಹಿ/- ಮುಖ್ಯ ಆಡಳಿತಾಧಿಕಾರಿಗಳು
ಪ್ರಧಾನ ಜಿಲ್ಲಾ ಮತ್ತು
ಸತ್ರ ನ್ಯಾಯಾಲಯ, ದಾವಣಗೆರೆ.

# ವಿವಿಧೆಡೆಯಲ್ಲಿ 78ನೇ ಸಂಭ್ರಮದ ಸ್ವಾತಂತ್ರ್ಯೋತ್ಸವ

ದಾವಣಗೆರೆ, ಆ. 22- ನಗರ ಹಾಗೂ ನಗರದ ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶ ಸೇರಿದಂತೆ ವಿವಿಧೆಡೆ 78ನೇ ಸ್ವಾತಂತ್ರ್ಯೋತ್ಸವವನ್ನು ಸಡಗರ - ಸಂಭ್ರಮದಿಂದ ಆಚರಿಸಲಾಯಿತು.

**ದಾವಣಗೆರೆ**

**ನಿಟುವಳ್ಳಿ ಜ್ಞಾನದೀಪ ಪಬ್ಲಿಕ್ ಶಾಲೆ :** ಶಾಲೆಯ ನಿರ್ದೇಶಕ ಹಾಗೂ ಶ್ರೀಶೈಲ ಮಲ್ಲಿಕಾರ್ಜುನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಕೆ. ಪ್ರಭು ಧ್ವಜಾರೋಹಣ ನೆರವೇರಿಸಿದರು. ಶಾಲೆಯ ಕಾರ್ಯದರ್ಶಿ ಕೆ. ಬಸವರಾಜಪ್ಪ ಮಾತನಾಡಿದರು. ಮುಖ್ಯ ಶಿಕ್ಷಕ ಕೆ. ನಾಗರಾಜ್, ಸಮನ್ವಯಾಧಿಕಾರಿ ಗಿರಿಜಾ ಕಬ್ಬೂರು, ಸಹ ಶಿಕ್ಷಕಿಯರಾದ ಶ್ರೀಮತಿ ರಶ್ಮಿ, ರಮ್ಯಾ, ಗೀತಾ, ಅಂಬಿಕಾ, ನಿರ್ಮಿತಾ, ಪೂರ್ಣಿಮಾ ಉಪಸ್ಥಿತರಿದ್ದರು. ರೂಪಾ ಪ್ರಾರ್ಥಿಸಿದರು. ಗಾಯತ್ರಿ ವಂದಿಸಿದರು.

**ರಾಯಣ್ಣ ಯುವ ಬ್ರಿಗೇಡ್ :** ಸಂಗೊಳ್ಳಿ ರಾಯಣ್ಣ ಜಯಂತಿ ಹಾಗೂ 78ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಜಯಕುಮಾರ್, ತೋಟಗೇರ್ ಹೊನ್ನಪ್ಪ, ತೋಟಗೇರ್ ದೇವರಾಜು, ಹರೀಶ ಟಿವಿ, ಕೆ.ಎನ್. ಚೇತನ, ಪ್ರಕಾಶ, ಮಹೇಶ, ನಾಗರಾಜ, ಮಣಿಕಂಠ, ಹರೀಶ, ಹನುಮಂತಪ್ಪ, ಜಯಪ್ಪ, ನಿಂಗರಾಜ್, ಮಾರುತಿ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


**ಡಾ॥ ಮಹಾಂತಸ್ವಾಮಿ ಪದವಿಪೂರ್ವ ಕಾಲೇಜು :** ಹರ ಎಜುಕೇಷನಲ್ ಟ್ರಸ್ಟ್ ಅಧ್ಯಕ್ಷ ಬಿ.ಸಿ. ಉಮಾಪತಿ ಹಾಗೂ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಸಮರ್ಥ ಅಕಾಡೆಮಿಯ ಅಧ್ಯಕ್ಷ ಪ್ರದೀಪ್ ಧ್ವಜಾರೋಹಣ ನೆರವೇರಿಸಿದರು.

ಕಾಲೇಜಿನ ಪ್ರಾಚಾರ್ಯರಾದ ಎಂ.ಎಸ್. ದೇವರಾಜ್, ಅಶೋಕ್, ಟ್ರಸ್ಟಿನ ನಿರ್ದೇಶಕರಾದ ಎಸ್.ಕೆ. ಶ್ರೀಧರ್, ರಾಜಶೇಖರ್ (ರಾಜಣ್ಣ ಕಡೇಕೊಪ್ಪ), ಬಸವರಾಜ್ ಅಣಪೂರ್, ಎಂ.ದೊಡ್ಡಪ್ಪ, ಬಾದಾಮಿ ಜಯಮ್ಮ, ಟ್ರಸ್ಟಿನ ಆಡಳಿತಾಧಿಕಾರಿ ಎಸ್. ಮಲ್ಲಿನಾಥ್,ಯೋಧ ಮಲ್ಲನಗೌಡ ಪಾಟೀಲ್, ಸಮಾಜದ ಮಹಿಳಾ ಘಟಕದ ಪದಾಧಿಕಾರಿ ಶ್ರೀಮತಿ ಸುಷ್ಮಾ ಪಾಟೀಲ್, ಶ್ರೀಮತಿ ಮೀನಾ ಪ್ರಸಾದ್ ಅಣಪೂರ್, ಶ್ರೀಮತಿ ವೀಣಾ ನಟರಾಜ್ ಬೆಳ್ಳೂಡಿ, ಶ್ರೀಮತಿ ಶಶಿಕಲಾ ಬಡದಾಳ, ಶ್ರೀಮತಿ ದೀಪಾ ದೇವರಾಜ್, ಎನ್.ಹೆಚ್. ಗುರುರಾಜ್, ಕಾಲೇಜಿನ ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ರಾಮಕೃಷ್ಣ ಇಂಟರ್‌ನ್ಯಾಷನಲ್ ಶಾಲೆ :** ವಿಜಯ ಟ್ರಾನ್ಸ್‌ಪೋರ್ಟ್ ಮಾಲೀಕ ಹಾಗೂ ರಾಮಲೀಲಾ ಎಜುಕೇಷನ್ ಟ್ರಸ್ಟ್ ನಿರ್ದೇಶಕರಾದ ಶ್ರೀಮತಿ ಸಹನ ವಿಜಯಕುಮಾರ್ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಶ್ರೀಮತಿ ವಿಜಯಕುಮಾರಿ ಉಮೇಶ ಬಾಬು ಮಠದ್, ಡಿ.ಸಿ. ಸುರೇಶ್, ಶೋಭಾ ಹುಲ್ಲುಮನಿ, ಕಾವ್ಯ, ಆಶಾ, ಮಹಾಲಕ್ಷ್ಮಿ ಅನಿತಾ, ಕರಿಬಸಮ್ಮ, ಶ್ರೀದೇವಿ, ತನುಶ್ರೀ, ಕಿರಣ್, ಅನುಸೂಯಮ್ಮ, ರಾಜೇಶ್ವರಿ ಉಪಸ್ಥಿತರಿದ್ದರು.

**ಎಲ್ಲಮ್ಮ ನಗರ ಸರ್ಕಾರಿ ಉರ್ದು ಶಾಲೆ :** ಎಸ್‌ಡಿಎಂಸಿ ಅಧ್ಯಕ್ಷ ಇಬ್ರಾಹಿಂ ಧ್ವಜಾರೋಹಣ ನೆರವೇರಿಸಿದರು. ಶಿಕ್ಷಣ ಪ್ರೇಮಿ ದಾದಾಪೀರ್, ಬಡ್ತಿ ಮುಖ್ಯ ಶಿಕ್ಷಕರಾದ ಶ್ರೀಮತಿ ಇಶ್ರತ್, ಎಸ್‌ಡಿಎಂಸಿ ಉಪಾಧ್ಯಕ್ಷ ತಯ್ಯಬ್ ಅಹ್ಮದ್, ಸ್ವಾತಂತ್ರ್ಯೋತ್ಸವ ಕುರಿತು ಮಾತನಾಡಿದರು. ಶ್ರೀಮತಿ ಶಾತಾಜ್ ಕಾರ್ಯಕ್ರಮ ನಿರೂಪಿಸಿದರು. ನಾಜಿಮಾ ಖಾನಂ ಪ್ರಾರ್ಥಿಸಿದರು. ಶ್ರೀಮತಿ ಶಾಹಿನ್ ಪರ್ವಿನ್ ಸ್ವಾಗತಿಸಿದರು. ಸೈರಾಬಾನು ವಂದಿಸಿದರು.



**ಡಾ. ಎಸ್.ಎಸ್.ಎನ್.ಪಿ. ಶಾಲೆ :** ಬಾಪೂಜಿ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಮಂಜುನಾಥ ರಂಗರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಬಿಎಸ್‌ಎಫ್ ಅಕಾಡೆಮಿ ಟ್ರೈನಿಂಗ್ ಇನ್‌ಸ್ಪೆಕ್ಟರ್ ಕೆ.ಆರ್. ಮಂಜಾನಾಯ್ಕ ಉಪಸ್ಥಿತರಿದ್ದು ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಪ್ರಾಂಶುಪಾಲರಾದ ಶ್ರೀಮತಿ ಕಮಲ ಬಿ. ನಾರಾಯಣ್ ಉಪಸ್ಥಿತರಿದ್ದರು.

**ಮಾತೃಶ್ರೀ ನಗರ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ :** ಈ ಸಂದರ್ಭದಲ್ಲಿ ಸಂಸ್ಥೆಯ ವತಿಯಿಂದ ಮಕ್ಕಳಿಗೆ ಶಿಕ್ಷಣವನ್ನು ಪ್ರೋತ್ಸಾಹಿಸುವ ಸಲುವಾಗಿ ಶಾಲಾ ಮಕ್ಕಳಿಗೆ ನೋಟ್ ಬುಕ್ ಮತ್ತು ಪೆನ್ ಹಾಗೂ ಕಲಿಕಾ ಸಾಮಗ್ರಿಗಳನ್ನು ವಿತರಣೆ ಮಾಡಲಾಯಿತು. ಸಂಸ್ಥೆಯ ಕಾರ್ಯದರ್ಶಿ ಯೋಗೇಶ್, ಲಕ್ಷ್ಮಿ, ಆಂಜನೇಯ ಉಪಸ್ಥಿತರಿದ್ದು ಮಾತನಾಡಿದರು. ಎಸ್‌ಡಿಎಂಸಿ ಅಧ್ಯಕ್ಷರು, ಡಿಎಸ್‌ಎಸ್ ಸ್ವಯಂ ಸೇವಕರು, ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.

**ಕುಲ್ಸುಂ ಶಾಲೆ :** ಸಂಸ್ಥೆಯ ಅಧ್ಯಕ್ಷ ಮಹ್ಮದ್ ಜುಬೇರ್ ಅಹ್ಮದ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಕೀಲರಾದ ರಜ್ವಿಖಾನ್, ಆರ್.ಎಸ್. ಸಿಂಗ್, ಶಾಲೆಯ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

**ನಲ್ಕುಂದ (ದಾವಣಗೆರೆ ತಾಲ್ಲೂಕು)**

**ದೀಪಾ ಕಾನ್ವೆಂಟ್ :** ಶಾಲೆಯ ಕಾರ್ಯದರ್ಶಿ, ಕೆಪಿಸಿಸಿ ಓಬಿಸಿ ಉಪಾಧ್ಯಕ್ಷ ಹಾಗೂ ಸಮಾಜ ಸೇವಕ ಹಾಲೇಶ್ ಧ್ವಜಾರೋಹಣ ನೆರವೇರಿಸಿದರು.

**ಕಾಡಜ್ಜಿ (ದಾವಣಗೆರೆ ತಾಲ್ಲೂಕು)**

**ಗ್ರಾಮ ಪಂಚಾಯ್ತಿ :** ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ಜ್ಯೋತಿಬಾಯಿ ಲಿಂಗಾನಾಯ್ಕ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಉಪಾಧ್ಯಕ್ಷರಾದ ಶ್ರೀಮತಿ ಸಿದ್ದೀಕ್ ಬಾನು ಜಾಹೀರಾಲಿ, ಗ್ರಾ.ಪಂ. ಸದಸ್ಯರುಗಳಾದ ಶ್ರೀಮತಿ ಶೈಲಜಾ ಬಸವರಾಜ್, ಈರಣ್ಣ, ಆರ್. ಉಮೇಶಯ್ಯ, ಶ್ರೀಮತಿ ಕಮಲಮ್ಮ, ಕೆಂಚಪ್ಪ, ಗೀತಮ್ಮ, ದೇವರಾಜನಾಯ್ಕ, ಆರ್. ಮಂಜಮ್ಮ, ವೇದಮೂರ್ತಿ, ಸಿದ್ದೇಶ್, ರತ್ನಮ್ಮ, ಎಸ್. ನಾಗರಾಜ್, ಜೆ. ನಾಗಮ್ಮ, ಶಬ್ಬೀರ್ ಸಾಬ್, ಮಾರಮ್ಮ, ಪಿಡಿಓ ನಾಗರಾಜ್, ಕಾರ್ಯದರ್ಶಿ ಬಸವರಾಜ್ ಮತ್ತಿತತರರು ಉಪಸ್ಥಿತರಿದ್ದರು.

**ಎಲೆಬೇತೂರು**

**ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ ಮತ್ತು ಶ್ರೀ ತರಳಬಾಳು ಹಿರಿಯ ಪ್ರಾಥಮಿಕ ಶಾಲೆ :** ಸ್ಥಳೀಯ ಸಲಹಾ ಸಮಿತಿ ಅಧ್ಯಕ್ಷ ಎಂ. ಬಸವರಾಜಪ್ಪ ಧ್ವಜಾರೋಹಣ ನೆರವೇರಿಸಿದರು. ಹೆಚ್. ಬಸವರಾಜಪ್ಪ, ಟಿ. ರಾಜಣ್ಣ, ಬಿ. ವಿರೂಪಾಕ್ಷಪ್ಪ, ಮರುಳಸಿದ್ದಪ್ಪ, ಬಿ. ಪ್ರಭು, ಎಂ. ಷಡಕ್ಷರಪ್ಪ, ಆರ್.ಜಿ. ನರೇಂದ್ರ, ಕೊಟ್ರೇಶ್, ಬಿ.ಜಿ. ಸಂಗನಗೌಡರು, ನಾರದಮುನಿಗೌಡರು, ಅಶೋಕ್ ಮರಡಿ, ಹಳ್ಳಿಕೆರೆ ರಾಜಣ್ಣ, ಚೇತನ್‌ಕುಮಾರ್, ಎಂ.ಬಿ. ಪ್ರೇಮಾ, ಬಿ.ಎಂ. ಶಶಿಕಲಾ, ವಿಶ್ವಬಂಧು ಪೆಟ್ರೋಲ್ ಬಂಕ್‌ನ ಮಾಲೀಕರಾದ ಮರುಳಸಿದ್ದಪ್ಪ ಉಪಸ್ಥಿತರಿದ್ದರು. ಟಿ.ಆರ್. ಪೂಜಾ, ವಿ.ಎಸ್. ಅನುಷಾ ಕಾರ್ಯಕ್ರಮ ನಡೆಸಿಕೊಟ್ಟರು. ಸಹನಾ, ನೇಹಾ ವಂದಿಸಿದರು ಉಷಾ ಪ್ರಾರ್ಥಿಸಿದರು.

**ಕುರ್ಕಿ**

**ಸರ್ಕಾರಿ ಪ್ರೌಢಶಾಲೆ :** ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷ ಕೆ.ವಿ. ಓಂಕಾರಪ್ಪ ಧ್ವಜಾರೋಹಣ ನೆರವೇರಿಸಿದರು. ಶಾಲೆಯ ಸಮಾಜ ವಿಜ್ಞಾನ ಶಿಕ್ಷಕ ಸಿ.ಜಿ. ಜಗದೀಶ್ ಕೂಲಂಬಿ, ಗ್ರಾಮದ ಹಿರಿಯ ಮುಖಂಡ ಓದೋಗೌಡ್ರ ರೇವಣಸಿದ್ದಪ್ಪ ಉಪಸ್ಥಿತರಿದ್ದು ಮಾತನಾಡಿದರು. ಶ್ರೀಮತಿ ಮೀರಾ ಕೆ.ಬಿ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಎಸ್‌ಡಿಎಂಸಿ ಸಮಿತಿ ಸದಸ್ಯರಾದ ಕೆ.ಜೆ. ನಾಗರಾಜ್, ಕೆ.ಎಸ್. ಚನ್ನಬಸಪ್ಪ, ಕಳಸಪ್ಪ, ಕೆ.ಎಂ. ಮಂಜುನಾಥಯ್ಯ, ಎ.ಎಂ. ಸಿದ್ದೇಶ್, ಶಾಲಾ ಶಿಕ್ಷಕರಾದ ರಾಘವೇಂದ್ರ, ಪ್ರಕಾಶ್, ಮಹ್ಮದ್ ರಫೀ, ನಾಗರಾಜ್ ಉಪಸ್ಥಿತರಿದ್ದರು. ಛಾಯಾಂಕ ಪ್ರಾರ್ಥಿಸಿದರು. ಶಕುಂತಲಾ ಸ್ವಾಗತಿಸಿದರು. ಪಾರ್ವತಮ್ಮ ನಿರೂಪಿಸಿದರು. ಶಿಕ್ಷಕ ವಿರೂಪಾಕ್ಷಿ ವಂದಿಸಿದರು.

**ಹರಿಹರ**

**ಎಸ್‌ಜೆಸಿಪಿಎಸ್ ಶಾಲೆ :** ರಾಷ್ಟ್ರಗೀತೆ ಹಾಡುವ ಮೂಲಕ ಸ್ವಾತಂತ್ರ್ಯದ ಹಬ್ಬ ಹಾಗೂ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನ್ ನಾಯಕರನ್ನು ಸ್ಮರಿಸುವ ಮೂಲಕ ಗೌರವ ಅರ್ಪಿಸಲಾಯಿತು. ನಂತರ ನಗರದ ಮಹಾತ್ಮಗಾಂಧಿ ಮೈದಾನಕ್ಕೆ ವಿದ್ಯಾರ್ಥಿಗಳು ತೆರಳಿ, ತಾಲ್ಲೂಕು ಆಡಳಿತದಿಂದ ಆಯೋಜಿಸಿದ್ದ 78ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗಿಯಾಗಿ ಮಕ್ಕಳು ದೇಶಭಕ್ತಿ ಗೀತೆಗಳನ್ನು ಹಾಡಿ - ನೃತ್ಯ ಮಾಡಿದರು, ಮುಖ್ಯ ಶಿಕ್ಷಕಿ ವೇದ, ಎಸ್.ಜೆ.ಸಿ.ಪಿ.ಎಸ್ ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರು ಇದ್ದರು.

**ಎಂಕೆಇಟಿ ಸಿಬಿಎಸ್‌ಇ ಶಾಲೆ :** ಶಾಲೆಯ ಆಡಳಿತಾಧಿಕಾರಿ ಡಾ. ಬಿ.ಟಿ. ಅಚ್ಯುತ್ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಶಾಲೆಯ ಪ್ರಾಂಶುಪಾಲ ಮಂಜುನಾಥ ಕುಲಕರ್ಣಿ ವ್ಯಸನಮುಕ್ತ ಸಮಾಜದ ಪ್ರತಿಜ್ಞಾ ವಿಧಿ ಬೋಧಿಸಿದರು. ಶ್ರೀಮತಿ ಅರ್ಚನಾ ಮುಳಗುಂದ್, ಗುರುಮೂರ್ತಿ ಉಪಸ್ಥಿತರಿದ್ದರು. ಸಂಗೀತ ಸಂಘದ ಹರ್ಷಿತ್ ಚಲವಾದಿ ಮತ್ತು ತಂಡದವರು ಪ್ರಾರ್ಥಿಸಿದರು. ಟಿ. ಐಶ್ವರ್ಯ ಸ್ವಾಗತಿಸಿದರು. ವಿನಯ್ ವಂದಿಸಿದರು. ಎಂ. ನಿಖಿತಾ, ಪಾವನಿ ಜಿ. ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

**ರಾಣೇಬೆನ್ನೂರು**

**ಮಾತಾ ಆಂಗ್ಲ ಮಾಧ್ಯಮ ಶಾಲೆ :** ಶಾಲಾ ಸದಸ್ಯ ಮಂಜುನಾಥ ಕೊಪ್ಪದ ಧ್ವಜಾರೋಹಣ ನೆರವೇರಿಸಿದರು. ಜಿಲ್ಲಾ ಜಾತ್ಯತೀತ ಜನತಾದಳದ ಅಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ, ಶಾಲಾ ಅಧ್ಯಕ್ಷ ಬಿ.ಹೆಚ್. ಮಡ್ಲೂರ, ಉಪಾಧ್ಯಕ್ಷ ಅಶೋಕ ಪೂಜಾರಿ, ಸದಸ್ಯರಾದ ಲತಾ, ವಿಶ್ವನಾಥ ಕಮ್ಮಾರ, ಶಂಭುನಾಥ ಕೋಟೂರ, ಮಹ್ಮದ್ ರಫೀಕ್, ಶಾಲಾ ಮುಖ್ಯಸ್ಥ ಚನ್ನಬಸಪ್ಪ, ಶಿಕ್ಷಕರಾದ ನಾಗೇಂದ್ರಪ್ಪ ಮಡಿವಾಳರ, ಪ್ರವೀಣಗೌಡ, ಶಿಕ್ಷಕಿಯರಾದ ಪುಷ್ಪಲತಾ ಉಜ್ಜೇರ, ಆಶಾ, ಚೈತ್ರಾ, ದೀಪಾ, ಅನಿತಾ, ಮಮತಾ, ಐಶ್ವರ್ಯ, ಗೀತಾ ಉಪಸ್ಥಿತರಿದ್ದರು.

# ಕಾಮಗಾರಿ ಬಾರಾ ಕಮಾನ್ ಆಗದಿರಲಿ

**(1ನೇ ಪುಟದಿಂದ)** ಟೆಂಡರ್ ವಿಳಂಬ, ಕಾಮಗಾರಿ ವಿಳಂಬ, ಜಾಗದ ಸಮಸ್ಯೆ, ಅನುದಾನ ವಿಳಂಬ ಇತ್ಯಾದಿಗಳ ಕಾರಣದಿಂದ ಕಾಮಗಾರಿಗಳು ತಡವಾಗುತ್ತಿವೆ. ಅವು ಬಾರಾ ಕಮಾನ್‌ನಂತೆ ನಿಂತು ಬಿಡುತ್ತವೆ. ಈ ರೀತಿ ಆಗದೇ, ಕಾಮಗಾರಿಗಳು ಸಮಾಜಕ್ಕೆ ಆಸ್ತಿಯಾಗಿ ಬಳಕೆಯಾಗಬೇಕು ಎಂದು ಹೇಳಿದರು.

ವೈಯಕ್ತಿಕ ಫಲಾನುಭವಿಗಳನ್ನು ತ್ವರಿತವಾಗಿ ಆಯ್ಕೆ ಮಾಡಿದರೆ, ನಿಗದಿತ ಸಮಯದಲ್ಲಿ ಅನುದಾನ ಬಳಸಿಕೊಳ್ಳಲು ಸಾಧ್ಯ. ಹೀಗಾಗಿ ಫಲಾನುಭವಿಗಳ ಆಯ್ಕೆಗೆ ತ್ವರಿತವಾಗಿ ಅರ್ಜಿ ಕರೆಯಬೇಕು ಹಾಗೂ ಆಯ್ಕೆಯನ್ನು ಸಂಬಂಧಿಸಿದವರ ಜೊತೆ ಚರ್ಚಿಸಿ ಅಂತಿಮಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಹೇಳಿದರು.

ಪರಿಶಿಷ್ಟರ ಹಣ ಬಳಕೆ ಮಾಡದೇ ಇರುವುದು ಕಾಯ್ದೆಯ ಪ್ರಕಾರ ಅಪರಾಧ. ಪರಿಶಿಷ್ಟರ ಕಾಮಗಾರಿಗಳಿಗೆ ಹಣ ಬಳಕೆ ಮಾಡದೇ ಇರುವವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು. ಹೀಗಾಗಿ ಕಾಲಮಿತಿಯಲ್ಲಿ ಅನುದಾನ ಬಳಕೆ ಮಾಡಬೇಕು. ಒಂದು ವೇಳೆ ಅನುದಾನ ಬಂದಿಲ್ಲ ಎಂದರೆ, ಸಂಬಂಧಪಟ್ಟ ಇಲಾಖೆಯನ್ನು ಸಂಪರ್ಕಿಸಿ ಕ್ರಮ ತೆಗೆದುಕೊಳ್ಳಬೇಕು ಎಂದು ಗಂಗಾಧರಸ್ವಾಮಿ ಹೇಳಿದರು.

ಎಸ್‌ಸಿಪಿ - ಟಿಎಸ್‌ಪಿ ಯೋಜನೆಯ ಪ್ರಗತಿ ವರದಿಯನ್ನು ಸಂಬಂಧಿಸಿದ ವೆಬ್ ತಾಣಗಳಲ್ಲಿ ದಾಖಲಿಸಬೇಕು. ವೈಯಕ್ತಿಕ ಫಲಾನುಭವಿಯ ಮಾಹಿತಿಯನ್ನು ಆಪ್‌ಗಳ ಮೂಲಕ ಅಪ್ಡೇಟ್ ಮಾಡಬೇಕು ಎಂದವರು ತಿಳಿಸಿದರು.

ಎಸ್.ಸಿ.ಪಿ, ಟಿ.ಎಸ್.ಪಿ. ಕ್ರಿಯಾ ಯೋಜನೆಯನ್ವಯ ಜಿಲ್ಲೆಗೆ 345.5 ಕೋಟಿ ರೂ. ಗಳಷ್ಟು ಅನುದಾನ ನಿಗದಿ ಮಾಡಿದ್ದು ಇದರಲ್ಲಿ 125.31 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಬಿಡುಗಡೆಯಾದ ಅನುದಾನದಲ್ಲಿ 98.82 ಕೋಟಿ ರೂ. ಖರ್ಚು ಮಾಡಲಾಗಿದೆ ಎಂದು ಸಭೆಗೆ ತಿಳಿಸಲಾಯಿತು.

ಸಭೆಯಲ್ಲಿ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಡಾ. ಮಹಂತೇಶ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಕೆ. ನಾಗರಾಜ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಷಣ್ಮುಖಪ್ಪ, ಡಿಡಿಪಿಐ ಜಿ. ಕೊಟ್ರೇಶ್ ಮತ್ತಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಅಹಿಂದ ಒಕ್ಕೂಟದಿಂದ ಇಂದು ಪ್ರತಿಭಟನೆ

**ಹೊನ್ನಾಳಿ**

ಹೊನ್ನಾಳಿ, ಆ.22- ಹೊನ್ನಾಳಿ, ನ್ಯಾಮತಿ ಅವಳಿ ತಾಲ್ಲೂಕು ಅಹಿಂದ ಒಕ್ಕೂಟ ಹಾಗೂ ಸಿದ್ದರಾಮಯ್ಯ ಅಭಿಮಾನಿ ಬಳಗದಿಂದ ನಾಳೆ ದಿನಾಂಕ 23ರ ಶುಕ್ರವಾರ ಬೆಳಿಗ್ಗೆ 11ಕ್ಕೆ 'ರಾಜ್ಯಪಾಲರೇ ಕರ್ನಾಟಕ ಬಿಟ್ಟು ತೊಲಗಿ ಎಂಬ ಎಚ್ಚರಿಕೆ ಸಂದೇಶದೊಂದಿಗೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಕುರುಬ ಸಮಾಜದ ಅಧ್ಯಕ್ಷ ನೆಲಹೊನ್ನೆ ಮೋಹನ್ ಹಾಗೂ ದಲಿತ ಮುಖಂಡ ದಿಡಗೂರು ತಮ್ಮಣ್ಣ ಜಂಟಿಯಾಗಿ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅವಳಿ ತಾಲ್ಲೂಕಿನ ಎಲ್ಲಾ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ತಾಲ್ಲೂಕು ವಾಲ್ಮೀಕಿ ಸಮಾಜದ ಅಧ್ಯಕ್ಷ ಶಿವಾನಂದ್, ತಾಲ್ಲೂಕು ಮೈನಾರಿಟಿ ಕಮಿಟಿ ಅಧ್ಯಕ್ಷ ಚೀಲೂರು ವಾಜೀದ್, ಜೈನ್ ಸಮಾಜದ ಮುಖಂಡ ಕೆಪಿಸಿಸಿ ಯುವ ವಕ್ತಾರ ದರ್ಶನ್ ಬಳ್ಳೇಶ್ವರ್ ಮಾತನಾಡಿದರು.

ಬಂಜಾರ್ ಸಮಾಜದ ಮುಖಂಡ ವಸಂತನಾಯ್ಕ, ಛಲವಾದಿ ಸಮಾಜದ ಕುರುವ ಮಂಜುನಾಥ್, ರುದ್ರೇಶ್ ಕೊಡತಾಳ್, ಕುರುಬ ಸಮಾಜದ ಖಜಾಂಚಿ ಎಚ್.ಎ. ನರಸಿಂಹಪ್ಪ, ಕೆ. ಪುಟ್ಟಪ್ಪ, ಎಚ್.ಡಿ. ವಿಜೇಂದ್ರಪ್ಪ, ಕುಂಬಳೂರು ವಾಗೀಶ್, ಕೃಷ್ಣಪ್ಪ ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

# ಜಗಳೂರು : ಶಿಕ್ಷಕ ಆರ್.ಎಸ್.ಓಬಳೇಶ್‌ಗೆ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ



ಜಗಳೂರು, ಆ. 22 - ತಾಲ್ಲೂಕಿನ ಕಣ್ವಕುಪ್ಪೆ ಗ್ರಾಮದ ಶಿಕ್ಷಕ ಆರ್.ಎಸ್. ಓಬಳೇಶ್ ರಾಜ್ಯಮಟ್ಟದ ದೇಹದಾರ್ಢ್ಯತೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಪಟ್ಟಣದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಇವರು ತಾಲ್ಲೂಕಿನ ಕಣ್ವಕುಪ್ಪೆ ಗ್ರಾಮದ ಆರ್.ಓ.ಸಣ್ಣ ಸಿದ್ದಪ್ಪ ಅವರ ಪುತ್ರರಾಗಿದ್ದು, ಇತ್ತೀಚೆಗೆ ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ಯುವ ಜನ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

# ಇಂದು ಕಾಂಗ್ರೆಸ್ ಹೈಕಮಾಂಡ್ ತೀರ್ಮಾನ

**(1ನೇ ಪುಟದಿಂದ)** ಮಾಡಿದ್ದಾರೆ. ವರಿಷ್ಠರ ಕರೆಯ ಮೇರೆಗೆ ನಾಳೆ ಬೆಳಗ್ಗೆ ದೆಹಲಿಗೆ ತೆರಳುವ ಉಭಯ ನಾಯಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಲಿದ್ದಾರೆ.

ವರಿಷ್ಠರ ಕರೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅವರು ಇಂದು ನಡೆದ ಸಂಪುಟ ಸಭೆ, ಆ ನಂತರ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ, ಸಚಿವರು ಮತ್ತು ಶಾಸಕರ ವಿಶ್ವಾಸ ತಮಗೆ ಇದೆ ಎಂಬುದನ್ನು ಮತ್ತೊಮ್ಮೆ ಖಾತ್ರಿ ಪಡಿಸಿಕೊಂಡಿದ್ದಾರೆ. ಸಂಪುಟ ಹಾಗೂ ಶಾಸಕಾಂಗ ಸಭೆ ತಮ್ಮ ಬೆಂಬಲಕ್ಕಿದೆ ಎಂಬುದನ್ನು ಮುಖ್ಯಮಂತ್ರಿ ಅವರು ನಾಳೆ ವರಿಷ್ಠರ ಗಮನಕ್ಕೆ ತರುವ ಉದ್ದೇಶದಿಂದಲೇ ಇಂದು ಎರಡೂ ಸಭೆಗಳನ್ನು ನಡೆಸಿದರು. ಮಹರ್ಷಿ ವಾಲ್ಮೀಕಿ ನಿಗಮ ಹಾಗೂ ಮುಡಾ ನಿವೇಶನಗಳ ಹಂಚಿಕೆ ಹಗರಣಗಳಲ್ಲಿ ತಮ್ಮ ಪಾತ್ರ ಇಲ್ಲ ಎಂಬುದನ್ನು ವರಿಷ್ಠರಿಗೆ ಈಗಾಗಲೇ ಹಲವು ಬಾರಿ ಮುಖ್ಯ ಮಂತ್ರಿ ಮನದಟ್ಟು ಮಾಡಿದ್ದಾರೆ. ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ರಾಜಭವನ ನೋಟಿಸ್ ನೀಡಿದ ಸಂದರ್ಭದಲ್ಲಿ ಎಐಸಿಸಿಯೇ ಸಿದ್ದರಾಮಯ್ಯ ಬೆಂಬಲಕ್ಕೆ ನಿಂತಿದ್ದಲ್ಲದೆ, ಸುಪ್ರೀಂಕೋರ್ಟ್‌ನ ಹಿರಿಯ ವಕೀಲರನ್ನು ನ್ಯಾಯಾಲಯದಲ್ಲಿ ವಕಾಲತ್ತು ವಹಿಸಲು ನೇಮಿಸಿತ್ತು.

# ಹಾಲಿನ ಉತ್ಪನ್ನ ವಿಭಜನೆಗೆ ತಡೆ

**(1ನೇ ಪುಟದಿಂದ)** ಆಧಾರದ ಮೇಲೆ ಎ1 ಹಾಗೂ ಎ2 ಎಂದು ವಿಭಜಿಸಲಾಗುತ್ತಿದೆ. ಆದರೆ, ಈ ರೀತಿಯ ಪ್ರತ್ಯೇಕತೆಗೆ ನಿಯಮಗಳಲ್ಲಿ ಮಾನ್ಯತೆ ಇಲ್ಲ ಎಂದು ತಿಳಿಸಲಾಗಿದೆ. ಈಗಾಗಲೇ ಮುದ್ರಿಸಲಾಗಿರುವ ಪಟ್ಟಣಗಳನ್ನು ಆರು ತಿಂಗಳಲ್ಲಿ ಖಾಲಿ ಮಾಡಿಕೊಳ್ಳಬೇಕು. ನಂತರದಲ್ಲಿ ಅನುಮತಿ ನೀಡುವುದಿಲ್ಲ ಎಂದು ತಿಳಿಸಲಾಗಿದೆ.

# ಮೈತ್ರಿ ಮೇಲೆ ಪ್ರಾಸಿಕ್ಯೂಷನ್ ಅಸ್ತ್ರ?

**(1ನೇ ಪುಟದಿಂದ)** ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ನಿಮ್ಮ ಉತ್ತರಕ್ಕೆ ಕಾಯುತ್ತಿವೆ ಎಂದವರು ಹೇಳಿದ್ದಾರೆ.

ಸಿದ್ದರಾಮಯ್ಯ ಅವರ ವಿಷಯದಲ್ಲಿ ರಾಜಭವನ ತೆಗೆದುಕೊಂಡ ತರಾತುರಿ ಇವರುಗಳ ಬಗ್ಗೆ ಏಕೆ ಇಲ್ಲ ಎಂದು ಸಭೆ ಪ್ರಶ್ನೆ ಮಾಡಿರುವುದಲ್ಲದೆ, ಸಾರ್ವಜನಿಕ ಹಿತದೃಷ್ಟಿಯಿಂದ ಈ ನಾಲ್ಕೂ ಪ್ರಕರಣಗಳಲ್ಲಿ ತನಿಖೆ ನಡೆಸಲು ಅನುಮತಿ ನೀಡಬೇಕು ಎಂದು ಸಲಹೆ ಮಾಡುತ್ತೇವೆ ಎಂದು ಪಾಟೀಲ್ ಹೇಳಿದ್ದಾರೆ.

197, 17ಎ ಅಡಿ ಕೆಲವು ಕೇಸ್ ಬಾಕಿ ಇವೆ. ಅದರಲ್ಲಿ ವಿಶೇಷವಾಗಿ ಶಶಿಕಲಾ ಜೊಲ್ಲೆ, 9/12/21 ರಂದು ಅರ್ಜಿ ಇದೆ, ಮುರುಗೇಶ್ ನಿರಾಣಿ 26/2/24 ರಂದು ಅರ್ಜಿ ಇದೆ, 21/11/23ರಂದು ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಅರ್ಜಿ ಹಾಗೂ ಜನಾರ್ದನ ರೆಡ್ಡಿ ವಿರುದ್ಧದ ಅರ್ಜಿಗಳು ಬಾಕಿ ಇವೆ. ಅದರಲ್ಲೂ ಕುಮಾರಸ್ವಾಮಿ ಹಾಗೂ ಜನಾರ್ದನ ರೆಡ್ಡಿ ವಿರುದ್ಧ ಲೋಕಾಯುಕ್ತ ಮತ್ತು ಎಸ್‌ಐಟಿ ತನಿಖೆ ನಡೆಸಿ ಆರೋಪ ಪಟ್ಟಿ ಸಲ್ಲಿಸಿವೆ. ಕುಮಾರಸ್ವಾಮಿ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜಭವನ ಜುಲೈ 29ರ 2024ರಂದು ಸ್ಪಷ್ಟೀಕರಣ ಕೇಳಿ ಎಸ್‌ಐಟಿಗೆ ಆಗಸ್ಟ್ 8ರಂದು ಪತ್ರ ತಲುಪಿದೆ. ರಾಜಭವನದ ಪತ್ರಕ್ಕೆ ಎಸ್‌ಐಟಿ ಆಗಸ್ಟ್ 16ರಂದು ಸ್ಪಷ್ಟೀಕರಣ ನೀಡಿದ್ದಾರೆ. ಅದರ ನಂತರವೂ ನೀವು ಯಾವುದೇ ತೀರ್ಮಾನ ಕೈಗೊಂಡಿಲ್ಲ. ಸಾರ್ವಜನಿಕರ ಮನೋಭಾವನೆ ಅರ್ಥ ಮಾಡಿಕೊಂಡಿರುವ ಸಂಪುಟ, ತನಗಿರುವ ಅಧಿಕಾರ ಬಳಕೆ ಮಾಡಿ, ಈ ನಾಲ್ಕೂ ವಿಶೇಷ ಪ್ರಕರಣಗಳನ್ನು ಪ್ರಾಸಿಕ್ಯೂಷನ್‌ಗೆ ನೀಡುವಂತೆ ಸಂಪುಟ ಸಲಹೆ ಮಾಡಿದೆ ಎಂದು ಸಚಿವ ಪಾಟೀಲ್ ತಿಳಿಸಿದರು.

ಮುಖ್ಯಮಂತ್ರಿ ವಿರುದ್ಧ ಪ್ರಾಸಿಕ್ಯೂಷನ್ ನೋಟಿಸ್ ನೀಡಿದ ನಂತರ ಆಗಸ್ಟ್ 1ರಂದು ಮಂತ್ರಿ ಪರಿಷತ್ ಸಭೆ ತೆಗೆದುಕೊಂಡ ಖಂಡನಾ ನಿರ್ಣಯಕ್ಕೆ ಇಂದಿನ ಸಭೆ ಘಟನೋತ್ತರ ಅನುಮೋದನೆ ನೀಡಿದೆ ಎಂದು ತಿಳಿಸಿದರು.

ವಿವಾದಾತ್ಮಕವಾಗಿದ್ದ ಜೆಎಸ್‌ಡಬ್ಲ್ಯೂ ಸ್ಟೀಲ್ ಕಂಪನಿಗೆ ಸಂಡೂರು ತಾಲ್ಲೂಕಿನಲ್ಲಿ 3,666 ಎಕರೆ ಭೂಮಿಗೆ ಶುದ್ಧ ಕ್ರಯಪತ್ರ ನೀಡುವ ನಿರ್ಧಾರ ಸಭೆ ಕೈಗೊಂಡಿತೆಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಹೆಬ್ಬಾಳದಿಂದ ಸಿಲ್ಕ್‌ಬೋರ್ಡ್ ವೃತ್ತದವರೆಗೂ 12,690 ಕೋಟಿ ರೂ. ವೆಚ್ಚದಲ್ಲಿ ಸುರಂಗ ರಸ್ತೆ ಮಾರ್ಗಕ್ಕೆ ಸಂಪುಟ ಅನುಮೋದನೆ ನೀಡಿದೆ. ರಾಜಧಾನಿಯಲ್ಲಿ 250 ಅಡಿ ಎತ್ತರದ ಆಕಾಶ ಗೋಪುರ ನಿರ್ಮಾಣಕ್ಕೆ 500 ಕೋಟಿ ರೂ. ವೆಚ್ಚ ಹಾಗೂ 52 ಇಂದಿರಾ ಕ್ಯಾಂಟೀನ್ ಆರಂಭಕ್ಕೆ ಸಂಪುಟ ಅನುಮೋದನೆ ನೀಡಿದೆ ಎಂದು ಅವರು ತಿಳಿಸಿದರು.

# ಕೆಳಗಿಳಿಯುವವರೆಗೆ ವಿರಮಿಸುವುದಿಲ್ಲ

**(1ನೇ ಪುಟದಿಂದ)** ದಲಿತರಿಗೆ ಮೀಸಲಿಟ್ಟ ಹಣ ವರ್ಗಾವಣೆ ಪ್ರಕರಣ, ವಾಲ್ಮೀಕಿ ನಿಗಮದ ಹಗರಣ, ಮುಡಾ ಹಗರಣ, ಎಲ್ಲವೂ ದಲಿತ ಸಮುದಾಯಕ್ಕೆ ಸೇರಿದ ವಿಚಾರಗಳು.

ಜನಹಿತ, ರಾಜ್ಯ ಹಿತದ ರಕ್ಷಣೆಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಲೇ ರಾಜೀನಾಮೆ ಕೊಡಬೇಕು ಎಂದು ಒತ್ತಾಯಿಸಿದರು.

ಇವರಿಗೆ ಮದ ಬಂದಿದೆ, ದುರಹಂಕಾರ ಹೆಚ್ಚಾಗಿದೆ, ಬಾಂಗ್ಲಾ ದೇಶದ ಪರಿಸ್ಥಿತಿ ನಿರ್ಮಿಸುವುದಾಗಿ ಹೇಳುತ್ತಾರೆ, ನಾಲಾಯಕ್ ಗವರ್ನರ್ ಎನ್ನುತ್ತಾರೆ, ರಾಜಭವನಕ್ಕೆ ನುಗ್ಗಿ ಹಲ್ಲೆ ಮಾಡುವುದಾಗಿ ಹೇಳುತ್ತಾರೆ ಎಂದು ಖಂಡಿಸಿದರು.

# ವಿಶ್ವಕರ್ಮ ಸಮುದಾಯಗಳಿಗೆ ವಿವಿಧ ಯೋಜನೆಯ ಸಾಲ ಸೌಲಭ್ಯ

ದಾವಣಗೆರೆ, ಆ. 22- ಕರ್ನಾಟಕ ವಿಶ್ವಕರ್ಮ ಸಮುದಾಯ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಾದ ಪಂಚವೃತ್ತಿ ಅಭಿವೃದ್ಧಿಗೆ ಆರ್ಥಿಕ ನೆರವು, ಸ್ವಯಂ ಉದ್ಯೋಗ ನೇರಸಾಲ, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ, ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಾತಂತ್ರ್ಯ ಅಮೃತ್ ಮಹೋತ್ಸವ ಮುನ್ನಡೆ ಯೋಜನೆಗಳ ಸಾಲ ಸೌಲಭ್ಯಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

10ನೇ ತರಗತಿ, ದ್ವಿತೀಯ ಪಿ.ಯು.ಸಿ, ಡಿಪ್ಲೋಮಾ, ಪದವಿ, ಇಂಜಿನಿಯರಿಂಗ್ ವ್ಯಾಸಂಗವನ್ನು ಪೂರ್ಣಗೊಳಿಸಿರಬೇಕು. ಅರ್ಜಿಯನ್ನು ಸಲ್ಲಿಸಲು https://www.kaushalkar.com ಜಾಲತಾಣದಲ್ಲಿ ಸಲ್ಲಿಸಬಹುದಾಗಿದೆ. ಇದೇ ದಿನಾಂಕ 31 ಕೊನೆಯ ದಿನವಾಗಿದೆ.


**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಮಹಿಳೆಯರು ಮತ್ತು ಪುರುಷರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 97385-23711

**ಸೈಟ್ ಬೇಕಾಗಿದೆ**
40x60 ಯಾವುದೇ ಮುಖ ಇದ್ದರೂ ಓಕೆ.
ವಿದ್ಯಾನಗರ, ವಿನಾಯಕ ಬಡಾವಣೆ, ತರಳಬಾಳು, ಶಿವ-ಪಾರ್ವತಿ, ಜೆ.ಹೆಚ್. ಪಟೇಲ್, KHB.
ಕಿರಣ್ ಬೂಸ್ನೂರ್ (ಏಜೆಂಟ್)
98440-63409
ಏಜೆಂಟರೂ ಸಂಪರ್ಕಿಸಬಹುದು.

**ಸೈಟುಗಳು ಮಾರಾಟಕ್ಕಿವೆ**
30x40 North, MBA ಕಾಲೇಜು ಹತ್ತಿರ, 30x50 North ಡಾಲರ್ಸ್ ಕಾಲೋನಿಯಲ್ಲಿ, 30x40 North ವಿವೇಕಾನಂದ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹರಿಹರ ಅಮರಾವತಿ ಕೆ.ಹೆಚ್.ಬಿ. ಮತ್ತು ಹೌಸಿಂಗ್ ಕಾಲೋನಿ ಪಕ್ಕದ ಹೆಚ್.ಆರ್.ಎಂ. ಬಡಾವಣೆಯಲ್ಲಿ 40x30 ಅಳತೆಯ ಪೂರ್ವ-ಪಶ್ಚಿಮ ಮುಖವುಳ್ಳ 4 ಸೈಟುಗಳು ನೇರ ಮಾಲೀಕರಿಂದ ಮಾರಾಟಕ್ಕಿವೆ.
ಸಂಪರ್ಕಿಸಿ.
98809 33630

**ಹೋಟೆಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
(ಅಡುಗೆ ಭಟ್ಟರಿಗೆ ಸಹಾಯಕ)
ಹೋಟೆಲ್ ಶ್ರೀ ಅನ್ನಪೂರ್ಣ ವೆಜ್
ವಿಶ್ವೇಶ್ವರಯ್ಯ ಪಾರ್ಕ್ ಮೇನ್ ಗೇಟ್ ಎದುರು, ಸಿ.ಜೆ. ಆಸ್ಪತ್ರೆ ಹತ್ತಿರ ದಾವಣಗೆರೆ. ಸಂಪರ್ಕಿಸಿ :
82174 97779

**Property Hub**
• EC
• E-swathu
• Building Licence
• Khatha Change
96118 66449

**ಸೈಟ್ ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, # 402, ಅಳತೆ 22x100 ಅಡಿ, ಉತ್ತರಾಭಿಮುಖ
94492 35021
96117 94684

**ಶ್ರೀ ಸಾಯಿ ಹೋಂ ಪ್ರಾಡಕ್ಟ್**
ಮನೆಯಲ್ಲೇ ತಯಾರಿಸಿದ ಮಸಾಲಾ ಪೌಡರ್‌ಗಳು ಮತ್ತು ಸಿಹಿ ತಿಂಡಿಗಳು ದೊರೆಯುತ್ತವೆ ಹಾಗೂ ಹೇರ್‌ಫಾಲ್, ಡೆಂಡ್ರಾಫ್, ವೈಟ್ ಹೇರ್ ಸಮಸ್ಯೆಗೆ Hair Oil ಮಾಡಲಾಗುತ್ತದೆ.
91102 74329

**1 BHK ಮನೆ ಬಾಡಿಗೆ/ ಲೀಜ್‌ಗೆ ಇದೆ**
1ನೇ ಮಹಡಿ ಮನೆ, #758/1, ಕಾವೇರಮ್ಮ ಶಾಲೆ ಹಿಂಭಾಗ, 4ನೇ ಮುಖ್ಯ ರಸ್ತೆ, 13ನೇ ಕ್ರಾಸ್, ಕೆ.ಬಿ. ಬಡಾವಣೆ, ದಾವಣಗೆರೆ-2.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
99648 66713, 99025 78036

**ಬೇಕಾಗಿದ್ದಾರೆ**
ACE TRACTOR SHOWROOM ಗಾಗಿ
ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ಮತ್ತು ಪ್ರತ್ಯೇಕ ಇನ್ಸೆಂಟಿವ್ ನೀಡಲಾಗುವುದು. ಅನುಭವವುಳ್ಳವರಿಗೆ ಪ್ರಥಮ ಆದ್ಯತೆ.
80952 54434, 9448202030

**WANTED**
Ladies / Gents SSLC passed or failed
having Experience in Bakery
Contact : Cindrella chocolate Shop
Vidyanagara 1st Bus stop (Near Coffe day) beside games galaxy Davanagere - 5

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**ನಿವೇಶನಗಳು ಮಾರಾಟಕ್ಕಿವೆ**
ಸರ್ಕಾರಿ ನೌಕರ ಬಡಾವಣೆಯ ಪ್ರಮುಖ ವಸತಿ ಪ್ರದೇಶದಲ್ಲಿ 1720 ಚದುರ ಅಡಿಯ ಉತ್ತರ-ಪಶ್ಚಿಮ ಕಾರ್ನರ್ ನಿವೇಶನ ಹಾಗೂ ಶಂಕರ್ ವಿಹಾರ್ ಲೇ ಔಟ್‌ನಲ್ಲಿ ಪಶ್ಚಿಮ ಮತ್ತು ದಕ್ಷಿಣ ಕಾರ್ನರ್‌ನ 600 ಚದುರ ಅಡಿಯ ನಿವೇಶನ ಮಾರಾಟಕ್ಕಿವೆ
81054 25694
79755 95836

**Job Opportunities**
Required Lab Chemist. (Male Only) For Aradhya Chemicals & Fertilizers (Only BSc., Agri, Candidates Can Apply)
73537 70016
Email : acfdvg@gmail.com

**ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕ್ಲೀನಿಂಗ್ ಕೆಲಸಕ್ಕೆ ಗಂಡ-ಹೆಂಡತಿ ಬೇಕಾಗಿದ್ದಾರೆ. ಈರ್ವರಿಗೂ ಸಂಬಳ ರೂ. 26000/- ರೂಂ ಮತ್ತು ಗ್ಯಾಸ್ ಉಚಿತ
97400 98047

**ಕೆಲಸಕ್ಕೆ ಬೇಕಾಗಿದ್ದಾರೆ**
SSLC/PUC/ITI/DIPLOMA ಪಾಸ್/ಫೇಲ್ ಆದ ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ.
ಜ್ಯೋತಿ ಮೆಟಲ್ಸ್
ಹಳೇ ಬಸ್ ಸ್ಟ್ಯಾಂಡ್.ಪಿ.ಬಿ. ರಸ್ತೆ, ಗಣಪತಿ ದೇವಸ್ಥಾನದ ಪಕ್ಕ, ದಾವಣಗೆರೆ.
98800 34643, 94800 51462

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು 18-35 ವರ್ಷದ ಹುಡುಗರು ಬೇಕಾಗಿದ್ದಾರೆ. ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಿ ಅನುಭವವಿರುವರಿಗೆ ಆದ್ಯತೆ
91089 96513

**WANTED**
Female Teachers
B.sc BEd., - 02
Aya - 02
Contact:
95356 10817

**ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ**
* ಕ್ಯಾಷಿಯರ್ * ಸಪ್ಲೈಯರ್ * ಕ್ಲೀನರ್ *ಸ್ಟೀವರ್ಡ್ * ಹೆಲ್ಪರ್
ಭರತ್ ಹೋಟೆಲ್
KSRTC ಮುಂಭಾಗ, ದಾವಣಗೆರೆ.
99162 87164

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**FULLY AUTOMATIC**
ಗ್ಯಾಸ್ ಗೀಸರ್ ಎಕ್ಸ್‌ಚೇಂಜ್
1000/- Rs. Off
ಸೇಲ್ಸ್, ಸರ್ವೀಸ್‌ಗಾಗಿ
ಮರುತ್ ಎಂಟರ್ ಪ್ರೈಸಸ್
ವೈ.ಎಂ.ಸಿ. ಕಾಂಪ್ಲೆಕ್ಸ್, ಸ್ಟೇಡಿಯಂ ಎದುರು, ಬಾಪೂಜಿ ಬ್ಯಾಂಕ್ ಹತ್ತಿರ, ದಾವಣಗೆರೆ.
98868 96574, 98458 67574

**WANTED**
Banking Sector Tele Caller (Female Only)
Qualification : Any Degree.
85500 23110
Interview Time - 11AM

**REQUIREMENT**
Receptionist
Age : 20-25
Salary: 10000 - 12000
Hairpoint Hair & beauty lounge, MCC 'B' block, 7th main, 3rd cross, Davanagere.
9738664400, 08192220755

**Dull in Algebra**
JEE FOUNDATION
CLASS 6 TO 10
BRUIT ACADEMY
M : 9739066956
(SINCE 2012)

**ಕೆಲಸಕ್ಕೆ ಬೇಕಾಗಿದ್ದಾರೆ**
ಲೆವೆನ್ ಕ್ಲಿಕ್ ಸ್ಟುಡಿಯೋಸ್
ಫೋಟೋ ಸ್ಟುಡಿಯೋದಲ್ಲಿ ಎಡಿಟಿಂಗ್ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಎಡಿಟಿಂಗ್ ಮಾಡಲು ನಾವೇ ಹೇಳಿಕೊಡುತ್ತೇವೆ. ಬೇಸಿಕ್ ಕಂಪ್ಯೂಟರ್ ಜ್ಞಾನವಿರಬೇಕು.
ಗ್ರೌಂಡ್ ಫ್ಲೋರ್, 5378/1E, ಶಾಮನೂರು SS ಮಾಲ್ ಹತ್ತಿರ, SS ಲೇಔಟ್, ದಾವಣಗೆರೆ.
63600 59699, 90608 35341

**ಉದ್ಯೋಗವಕಾಶ**
ಯುವಕ ಯುವತಿಯರಿಗೆ ಸುವರ್ಣ ಅವಕಾಶ
IIFL ಸಮಸ್ತ ಫೈನಾನ್ಸ್ ಲಿಮಿಟೆಡ್ ಕೆಲಸದ ಸ್ಥಳ : ದಾವಣಗೆರೆ, ಹೊನ್ನಾಳಿ.
ವಿದ್ಯಾರ್ಹತೆ :
SSLC, PUC or Degree
ಸಂದರ್ಶನದ ದಿನಾಂಕ : 23.08.2024ರ ಬೆಳಿಗ್ಗೆ 8.30 ರಿಂದ 4.00ರವರೆಗೆ, ದಾವಣಗೆರೆ.
ಮೊ : 89042 89019

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ಕಲ್ಲೇಶ್ವರ ಮಿಲ್‌ನಲ್ಲಿ 08 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ :
ಅಸೋಸಿಯೇಟೆಡ್ ಎಂಟರ್‌ಪ್ರೈಸಸ್
ಗಣೇಶ್ ಲೇಔಟ್, ದಾವಣಗೆರೆ.
90605 45500, 99169 29713
74111 13888, 97390 89022

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ROYALOAK FURNITURE**
we are Hiring
Sales & Marketing
Interview on 25.08.2024
Opp. Shellpetrol bunk, beside Sruthi Moters, P.B. Road, Davanagere-577006
Call on 63621 45757

# ರಾಜ್ಯಪಾಲರ ವಿರುದ್ಧದ ಅವಹೇಳನಕಾರಿ ಹೇಳಿಕೆ ಖಂಡಿಸಿ ಜಿಲ್ಲಾ ಬಿಜೆಪಿ ಪ್ರತಿಭಟನೆ

ದಾವಣಗೆರೆ, ಆ. 22- ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ವಿರುದ್ಧ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಬೇಕು. ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ವಿರುದ್ಧ ಮಾಡುತ್ತಿರುವ ಅವಹೇಳನಕಾರಿ ಹೇಳಿಕೆ ಖಂಡಿಸಿ ಕಾಂಗ್ರೆಸ್ ವಿರುದ್ಧ ಬಿಜೆಪಿ ಜಿಲ್ಲಾ ಘಟಕದ ವತಿಯಿಂದ ಇಂದು ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಬಿಜೆಪಿ ಜಿಲ್ಲಾ ಕಚೇರಿಯಿಂದ ಉಪವಿಭಾಗಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ನಂತರ ಮನವಿ ಸಲ್ಲಿಸಲಾಯಿತು. ಇದಕ್ಕೂ ಮುನ್ನ ರೈಲ್ವೆ ನಿಲ್ದಾಣದ ಮುಂಭಾಗದಲ್ಲಿರುವ ವೃತ್ತದಲ್ಲಿ ಮಾನವ ಸರಪಳಿ ರಚಿಸಿ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಹಾಕಲಾಯಿತು.

ರಾಜ್ಯಪಾಲರ ಸಾಂವಿಧಾನಿಕ ಹುದ್ದೆಗೆ ಅಗೌರವ ತೋರುತ್ತಿರುವ ಕಾಂಗ್ರೆಸ್ ಮುಖಂಡರು, ಸಚಿವರು, ಶಾಸಕರು ಹಾಗೂ ಕಾರ್ಯಕರ್ತರ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಿಸಬೇಕು.

ಮುಡಾ ಪ್ರಕರಣದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ರಾಜೀನಾಮೆ ನೀಡಬೇಕು. ರಾಜ್ಯಪಾಲರಿಗೆ ಅವಹೇಳನಕಾರಿಯಾಗಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಐವಾನ್ ಡಿಸೋಜಾ ಹಾಗೂ ಸಚಿವ ಜಮೀರ್ ಅಹಮದ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.

ಇದೇ ವೇಳೆ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿ,




ಸಾಮಾಜಿಕ ಕಾರ್ಯಕರ್ತರೊಬ್ಬರು ನೀಡಿದ ದೂರು ಆಧರಿಸಿ ರಾಜ್ಯಪಾಲರು ಪ್ರಾಸಿಕ್ಯೂಶನ್‌ಗೆ ಅನುಮತಿ ನೀಡಿದ್ದಾರೆ. ಈ ಬಗ್ಗೆ ಕಾನೂನು ಹೋರಾಟ ಮಾಡಲು ಅವಕಾಶವಿದೆ. ಇದನ್ನು ಬಿಟ್ಟು ರಾಜ್ಯಪಾಲರನ್ನು ಅವಹೇಳನ ಮಾಡುವುದನ್ನು ಸಹಿಸಲು ಸಾಧ್ಯವಿಲ್ಲ. ನಿಮಗೆ ಧೈರ್ಯವಿದ್ದರೆ ರಾಜಭವನಕ್ಕೆ ನುಗ್ಗಿ ಎಂದು ಸವಾಲೆಸೆದರು.

ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ನಾಗಪ್ಪ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನೂರಾರು ಕೋಟಿ ಭ್ರಷ್ಟಾಚಾರ ನಡೆಸಲಾಗಿದೆ. ಈ ಹಣವನ್ನು ಬಳ್ಳಾರಿ ಲೋಕಸಭಾ ಚುನಾವಣೆಗೆ ವೆಚ್ಚ ಮಾಡಲಾಗಿದೆ. ಈ ಪ್ರಕರಣದಲ್ಲಿ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡಿದ್ದು, ನೈತಿಕ ಹೊಣೆ ಹೊತ್ತು ಸಿಎಂ ರಾಜೀನಾಮೆ ನೀಡಬೇಕಿತ್ತು.

ಸಿದ್ದರಾಮಯ್ಯ ಅವರಿಗೆ ಅಧಿಕಾರದ ವ್ಯಾಮೋಹ ಹೆಚ್ಚಾಗಿದೆ. ಐವಾನ್ ಡಿಸೋಜ ಹಾಗೂ ಜಮೀರ್ ಅಹಮದ್ ಅವರ ವರ್ತನೆ ಭಯೋತ್ಪಾದಕರ ರೀತಿಯಲ್ಲಿದೆ. ಇವರ ವಿರುದ್ಧ ಭಯೋತ್ಪಾದಕ ನಿಗ್ರಹ ದಳಕ್ಕೆ ದೂರು ಕೊಡಲು ನಿರ್ಧರಿಸಿದ್ದೇನೆ ಎಂದರು.

ಪ್ರತಿಭಟನೆಯಲ್ಲಿ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ವೀರೇಶ್ ಹನಗವಾಡಿ, ಯಶವಂತರಾವ್ ಜಾಧವ್, ಶ್ರೀನಿವಾಸ ದಾಸಕರಿಯಪ್ಪ, ರಾಜನಹಳ್ಳಿ ಶಿವಕುಮಾರ್, ಮಾಡಾಳು ಮಲ್ಲಿಕಾರ್ಜುನ್, ಬಿ.ಜಿ. ಅಜಯ್ ಕುಮಾರ್, ಕೆ. ಪ್ರಸನ್ನಕುಮಾರ್, ಜಗದೀಶ್, ಬಿ.ಎಂ. ಸತೀಶ್ ಕೊಳೇನಹಳ್ಳಿ, ಧನಂಜಯ ಕಡ್ಲೇಬಾಳು, ಹನುಮಂತನಾಯ್ಕ, ಶಿವನಗೌಡ ಪಾಟೀಲ್, ವೀಣಾ ನಂಜಪ್ಪ, ರುದ್ರೇಶ್, ನಸೀರ್ ಅಹಮದ್, ಮಂಜುನಾಥ, ಗಂಗಾಧರ್, ಕೊಟ್ರೇಶ್, ಅನಿಲ್ ಕುಮಾರ್ ನಾಯ್ಕ ಮತ್ತಿತರರು ಭಾಗವಹಿಸಿದ್ದರು.

## ಪಠ್ಯೇತರ ಚಟುವಟಿಕೆಗಳಿಂದ ವ್ಯಕ್ತಿತ್ವ ವಿಕಸನ



ದಾವಣಗೆರೆ, ಆ. 22- ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ ಸೇರಿದಂತೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ. ತನ್ಮೂಲಕ ಉನ್ನತ ಸಾಧನೆಗೈಯ್ಯುವಂತೆ ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್. ಬಡದಾಳ್ ಕರೆ ನೀಡಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಅನ್ವೇಷಕರು ಆರ್ಟ್ ಫೌಂಡೇಶನ್ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ 6 ನೇ ಶೈಕ್ಷಣಿಕ ರಂಗಯಾತ್ರೆ ಅಂಗವಾಗಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪೂರ್ಣಚಂದ್ರ ತೇಜಸ್ವಿ ಅವರ 'ಕೃಷ್ಣೇಗೌಡನ ಆನೆ' ನಾಟಕ ಪ್ರದರ್ಶನದಲ್ಲಿ ಅವರು ಮಾತನಾಡಿದರು.

ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ. ಸಾಂಸ್ಕೃತಿಕ ಇನ್ನಿತರೆ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ತಮ್ಮಲ್ಲಿ ಅಡಗಿರುವ ಪ್ರತಿಭೆಯನ್ನು ಹೊರ ಹಾಕಲು ಸಾಧ್ಯ ಎಂದರು.

ಮೊಬೈಲ್, ವ್ಯಾಟ್ಸಾಪ್, ಫೇಸ್‌ಬುಕ್ ಸೇರಿದಂತೆ ಸಾಮಾಜಿಕ ಜಾಲತಾಣದ ಅತಿಯಾದ ಬಳಕೆಯಿಂದ ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳದೇ ವ್ಯಕ್ತಿತ್ವ ವಿಕಸನಗೊಳ್ಳುವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಸಲಹೆ ನೀಡಿದರು.

ಅವಶ್ಯಕತೆಗೆ ತಕ್ಕಂತೆ ಮತ್ತು ಉತ್ತಮ ವಿಚಾರಗಳಿಗಾಗಿ ಮೊಬೈಲ್ ಬಳಕೆ ಇರಲಿ. ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಯ ಸರ್ವಾಂಗೀಣ ಬೆಳವಣಿಗೆಗೆ ಕಾರಣವಾಗುತ್ತವೆ. ಪೋಷಕರು ಸಹ ವಿದ್ಯಾರ್ಥಿಗಳ ಓದಿಗೆ ಹೆಚ್ಚು ಪ್ರೋತ್ಸಾಹಿಸಬೇಕೆಂದರು.

ನಾಟಕೋತ್ಸವ ಉದ್ಘಾಟಿಸಿದ ಐಕಾಂತಿಕ ಸಮುದಾಯದ ಸಹಜ ಕೃಷಿಕ ರಾಘವ ಮತ್ತು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಪೂರ್ಣಚಂದ್ರ ತೇಜಸ್ವಿ ರಚಿಸಿರುವ 'ಕೃಷ್ಣಗೌಡನ ಆನೆ' ನಾಟಕ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗೆ ಪೂರಕವಾಗಿದೆ. ರಂಗಕರ್ಮಿ, ನಿರ್ದೇಶಕ ಎಸ್.ಎಸ್. ಸಿದ್ಧರಾಜು ಅವರ ರಂಗಸೇವೆ, ನಿರ್ದೇಶನ, ರಂಗರೂಪ ಕಾರ್ಯ ಪ್ರಶಂಸನೀಯವಾದುದು. ಅವರ ಶ್ರಮ ಸಾರ್ಥಕ ಎಂದು ಹೇಳಿದರು.

ರಂಗ ಸಂಘಟಕ ಎಸ್.ಎಸ್. ಸಿದ್ದರಾಜ್ ಮತ್ತಿತರರು ಉಪಸ್ಥಿತರಿದ್ದರು. ಸಪ್ತಗಿರಿ ವಿದ್ಯಾಸಂಸ್ಥೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಶಿಕ್ಷಕ ವೃಂದದವರು ಸಂವಾದದಲ್ಲಿ ಪಾಲ್ಗೊಂಡಿದ್ದರು.

## ವಿಕಲಚೇತನ ಪತ್ರಿಕಾ ವಿತರಕರಿಗೆ ಸನ್ಮಾನ

ದಾವಣಗೆರೆ, ಆ. 22- ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಹಾಗೂ ಕಾರ್ಯನಿರತ ಪತ್ರಿಕಾ ವಿತರಕರ/ ಹಂಚಿಕೆದಾರರ ಸಂಘ, ಚಿತ್ರದುರ್ಗ ಇವರ ಸಹಯೋಗದಲ್ಲಿ ಸೆಪ್ಟೆಂಬರ್ 8 ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಪತ್ರಿಕಾ ವಿತರಕರ 4 ನೇ ರಾಜ್ಯ ಸಮ್ಮೇಳನದಲ್ಲಿ ವಿಕಲ ಚೇತನ ಪತ್ರಿಕಾ ವಿತರಕರನ್ನು ಸನ್ಮಾನಿಸಲಾಗುವುದು.

ರಾಜ್ಯದ ಯಾವುದೇ ನಗರ ಜಿಲ್ಲೆ ಹಾಗೂ ತಾಲ್ಲೂಕು ವಿಕಲಚೇತನ ವಿತರಕರು ತಮ್ಮ ಪರಿಪೂರ್ಣ ಮಾಹಿತಿಗಳೊಂದಿಗೆ ಇದೇ ದಿನಾಂಕ 25 ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ, ಎ.ಎನ್. ಕೃಷ್ಣಮೂರ್ತಿ, ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಜಿಲ್ಲಾ ಸಂಘ (9886912487) ಅವರನ್ನು ಸಂಪರ್ಕಿಸಬಹುದಾಗಿದೆ.

## ಕಠಿಣ ಪರಿಶ್ರಮದಿಂದ ಶ್ರೇಯಸ್ಸು ಹೆಚ್ಚುತ್ತದೆ

### ಭದ್ರಾ ಕಾಲೇಜಿನ ಕಾರ್ಯಕ್ರಮದಲ್ಲಿ ವಿಶ್ರಾಂತ ಡೀನ್ ಡಾ. ಎಲ್. ಮಂಜುನಾಥ್



ದಾವಣಗೆರೆ, ಆ. 22- ಶಿಕ್ಷಣವು ಜೀವನದ ಸಿದ್ಧತೆ. ಕಠಿಣ ಪರಿಶ್ರಮದಿಂದ ಶ್ರೇಯಸ್ಸು ಹೆಚ್ಚಾಗುತ್ತದೆ ಎಂದು ವಿಶ್ರಾಂತ ಡೀನ್ ಡಾ. ಎಲ್. ಮಂಜುನಾಥ್ ತಿಳಿಸಿದರು.

ನಗರದ ರೋಟರಿ ಕ್ಲಬ್ ಸಮುದಾಯ ಭವನದಲ್ಲಿ ಏರ್ಪಾಡಾಗಿದ್ದ ಭದ್ರಾ ಸ್ನಾತಕೋತ್ತರ ಕೇಂದ್ರದ 2023-24 ನೇ ಸಾಲಿನ ಎಂ.ಕಾಂ. ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಹಾಗೂ 2022-23 ನೇ ಸಾಲಿನ ಪದವಿ ಪ್ರಮಾಣ ಪತ್ರ ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದು ಅವರು ಮಾತನಾಡುತ್ತಿದ್ದರು.

ಬಡ ಕುಟುಂಬದಿಂದ ಸಾಧಕರು ಹೊರ ಹೊಮ್ಮುತ್ತಾರೆ ಎಂಬುದಕ್ಕೆ ರವಿ ಡಿ. ಚೆನ್ನಣ್ಣರಂತಹ ಹಲವರ ಉದಾಹರಣೆಗಳನ್ನು ನೀಡುತ್ತಾ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ಹಾಗೂ ವೃತ್ತಿ ಗೌರವ ಕುರಿತು ತಿಳಿಸಿದರು ಹಾಗೂ ಭದ್ರಾ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುವವರು ಜೀವನದಲ್ಲಿ ಭದ್ರತೆ ಕಂಡುಕೊಂಡು, ನಿಯತ್ತಿನ ಬದುಕು ಪಡೆಯಲಿ ಎಂದು ಹಾರೈಸಿದರು.

ಸೆನೆಟ್ ಹಾಗೂ ಸಿಂಡಿಕೇಟ್ ಮಾಜಿ ಸದಸ್ಯ ಪ್ರೊ. ಸಿ.ಹೆಚ್. ಮುರಿಗೇಂದ್ರಪ್ಪ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸೃಜನಶೀಲ ಮನೋಭಾವ ಅತ್ಯವಶ್ಯಕವೆಂದು ಹೇಳುವುದರ ಮೂಲಕ ಯುವ ಮಕ್ಕಳಲ್ಲಿ ಕೀಳರಿಮೆಯ ಮನೋಭಾವನೆ ಇರಬಾರದೆಂದು ತಿಳಿಸಿದರು. ಇಂದಿನ ತಾಂತ್ರಿಕ ಯುಗದಲ್ಲಿ ಅನೇಕ ತಂತ್ರಜ್ಞಾನ ಹಾಗೂ ಆವಿಷ್ಕಾರಗಳಿಂದ ಆಧುನಿಕ ಯುಗದ ನಿರ್ಮಾಣವಾಗಿದೆ. ಹಾಗಾಗಿ ಯುವ ಜನಾಂಗ ಅತ್ಯಂತ ಪ್ರಜ್ಞಾಪೂರ್ವಕವಾಗಿ ಜೀವನ ರೂಪಿಸಿಕೊಳ್ಳಬೇಕಾಗಿದೆ ಎಂದರು.

ಭದ್ರಾ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಟಿ. ಮುರುಗೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಧನೆ ಇಲ್ಲದೆ ಸತ್ತರೆ ಸಾವಿಗೆ ಅವಮಾನ, ಆದರ್ಶ ಇಲ್ಲದೆ ಬದುಕಿದರೆ ಬದುಕಿಗೆ ಅವಮಾನ ಮಾಡಿದಂತೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಸಂವಹನ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿ ಹೇಳಿದರು.

ಕಾರ್ಯಕ್ರಮದಲ್ಲಿ ಪ್ರೊ. ಡಿ. ಚಂದ್ರಪ್ಪ, ಎಂ. ಸಂಕೇತ್ ಉಪಸ್ಥಿತರಿದ್ದರು. ಕು. ವನಿತಾ, ಸಾಧನಾ ಸ್ವಾಗತಿಸಿದರು. ವನಿತಾ, ಭಾವನಾ ತೇಲ್ಕರ್ ವಂದಿಸಿದರು.

## ಸುಗಮ ಸಂಗೀತ ಕಾರ್ಯಕ್ರಮ ಯಶಸ್ವಿ



ದಾವಣಗೆರೆ, ಆ.22- ಶ್ರೀಶೈಲ ಮಲ್ಲಿಕಾರ್ಜುನ ವಿವಿಧ ನಾಟಕ ಕಲಾವಿದರ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಆಶ್ರಯದಲ್ಲಿ ಈಚೆಗೆ ಸಿಂಚನ ಕಲಾ ಬಳಗದಿಂದ ನಗರದ ಭಾವೈಕ್ಯತಾ ವಸತಿಯುತ ಶಾಲೆಯಲ್ಲಿ ಸುಗಮ ಸಂಗೀತ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.

ಈಚೆಗೆ ಬಿ.ಆರ್ ಅಂಬೇಡ್ಕರ್ ಸೇವಾ ರತ್ನ ಪ್ರಶಸ್ತಿ ಪಡೆದ ಸಂಘದ ಅಧ್ಯಕ್ಷೆ ಕಮಲಮ್ಮ ಅವರಿಗೆ ಇದೇ ವೇಳೆ ಅಭಿನಂದನೆ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಲಾ ಆಡಳಿತ ಮಂಡಳಿಯ ಕಾದಲ್‌ಕಾರ್, ಪೋಪಟ್ ಲಾಲ್ ಜೈನ್, ಹನುಮೇಶ್, ಪ್ರೇಮಲತಾ ಇದ್ದರು.

## ನಗರದಲ್ಲಿಂದು ಚೌಡೇಶ್ವರಿ ದೇವಿಗೆ ಪೂಜೆ

ಪಿ.ಜೆ. ಬಡಾವಣೆ 6 ನೇ ಕ್ರಾಸ್, 6 ಮೇನ್ ಸೇಂಟ್ ಪಾಲ್ಸ್ ಹತ್ತಿರವಿರುವ ಶ್ರೀ ಚೌಡೇಶ್ವರಿ ದೇವಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ ದೇವಸ್ಥಾನದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಶ್ರೀ ಚೌಡೇಶ್ವರಿ ದೇವಿ ಅಮ್ಮನವರಿಗೆ ವಿಶೇಷ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇಂದು ಬೆಳಿಗ್ಗೆ 7 ಕ್ಕೆ ಶ್ರೀ ಚೌಡೇಶ್ವರಿ ದೇವಿಗೆ ಪಂಚಾಮೃತಾಭಿಷೇಕ, ರುದ್ರಭಿಷೇಕ ನಂತರ ಅಮ್ಮನವರ ವಿಶೇಷ ಅಲಂಕಾರ ಪೂಜೆ ಇರುತ್ತದೆ. ಮಂಗಳಾರತಿ ನಂತರ ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

## ಏಕಲವ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ,ಆ.22- ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯಿಂದ ಸಂಘಟಿಸುವ ಕ್ರೀಡಾ ಕ್ಷೇತ್ರದಲ್ಲಿ 2023 ರಲ್ಲಿ ಅಸಾಧಾರಣ ಪ್ರತಿಭೆ ತೋರಿರುವ ರಾಜ್ಯದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

ಪ್ರತಿಭಾನ್ವಿತ ಕ್ರೀಡಾಪಟುಗಳು ಏಕಲವ್ಯ ಪ್ರಶಸ್ತಿಗಾಗಿ ಅರ್ಜಿಯನ್ನು ಕಚೇರಿಯಿಂದ ಪಡೆದು ಅಗತ್ಯ ದಾಖಲೆಗಳೊಂದಿಗೆ ಸೆಪ್ಟೆಂಬರ್ 10 ರೊಳಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ಇಲ್ಲಿಗೆ ಸಲ್ಲಿಸಲು ಸಹಾಯಕ ನಿರ್ದೇಶಕರಾದ ಜಯಲಕ್ಷ್ಮಿ ಬಾಯಿ ತಿಳಿಸಿದ್ದಾರೆ.

## ಶ್ರೀ ಸೇವಾಲಾಲ್ ಮೂರ್ತಿ ಪ್ರತಿಷ್ಠಾಪನೆ : ಕಲಾ ಮೆರವಣಿಗೆ



ದಾವಣಗೆರೆ, ಆ.22- ನಗರದ ಭಾರತ್ ಕಾಲೋನಿ 9ನೇ ಕ್ರಾಸ್‌ನಲ್ಲಿ ಶ್ರೀ ಸೇವಾಲಾಲ್ ಮರಿಯಮ್ಮ ಜೀರ್ಣೋದ್ಧಾರ ಟ್ರಸ್ಟ್ ಹಾಗೂ ಮರಿಯಮ್ಮ ದೇವಸ್ಥಾನದ ಟ್ರಸ್ಟ್ ವತಿಯಿಂದ ಇದೇ ದಿನಾಂಕ 28ರಂದು ನಡೆಯಲಿರುವ ಶ್ರೀ ಸೇವಾಲಾಲ್ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮದ ಅಂಗವಾಗಿ ಇಂದು ಮಧ್ಯಾಹ್ನ ಬಂಜಾರ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಯಿತು.

ಶ್ರೀ ಲಿಂಗೇಶ್ವರ ದೇವಸ್ಥಾನದಿಂದ ಕುಂಭ ಮೇಳದೊಂದಿಗೆ ಆರಂಭವಾದ ಮೆರವಣಿಗೆಯು, ಭಾರತ್ ಕಾಲೋನಿ 9ನೇ ಕ್ರಾಸ್ ಶ್ರೀ ಸೇವಾಲಾಲ್ ದೇವಸ್ಥಾನಕ್ಕೆ ಬಂದು ಕೊನೆಗೊಂಡಿತು.

ಮೆರವಣಿಗೆಯನ್ನು ನಗರ ಪೊಲೀಸ್ ಉಪಾಧೀಕ್ಷಕ ಮಲ್ಲೇಶ್ ದೊಡ್ಡಮನಿ ಉದ್ಘಾಟಿಸಿದರು. ಮಹಾನಗರ ಪಾಲಿಕೆ ಸದಸ್ಯರಾದ ಮೀನಾಕ್ಷಿ ಜಗದೀಶ್, ಶಿವಪ್ರಕಾಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಶ್ರೀ ಸೇವಾಲಾಲ್ ಮರಿಯಮ್ಮ ದೇವಸ್ಥಾನದ ಅಧ್ಯಕ್ಷ ಸಿ. ವೆಂಕಟೇಶ್ ನಾಯ್ಕ್, ಶ್ರೀ ಸೇವಾಲಾಲ್ ಮರಿಯಮ್ಮ ಜೀರ್ಣೋದ್ಧಾರ ಟ್ರಸ್ಟ್ ಅಧ್ಯಕ್ಷ ಎನ್. ವೆಂಕಟೇಶನಾಯ್ಕ್, ಗೌರವಾಧ್ಯಕ್ಷರಾದ ದೇವೀರಮ್ಮ ರಾಮಚಂದ್ರನಾಯ್ಕ್, ತಿಮ್ಮೇಶ್ ನಾಯ್ಕ್, ವಕೀಲ ಗೋಪಾಲನಾಯ್ಕ್, ದ್ರೋಣಾ ನಾಯ್ಕ್, ಖಜಾಂಚಿ ರಮೇಶ್ ನಾಯ್ಕ್, ಕೃಷ್ಣಾನಾಯ್ಕ್, ವೆಂಕಟೇಶ್ ನಾಯ್ಕ್, ಲಕ್ಷ್ಮಾನಾಯ್ಕ್, ಕರಿಬಸವ ನಾಯ್ಕ್, ಸೋಮ್ಲಿ ಕೃಷ್ಣನಾಯ್ಕ್, ಎನ್. ಮಾಂತೇಶ್ ನಾಯ್ಕ್, ಮಂಜಾನಾಯ್ಕ್, ರಾಜಾನಾಯ್ಕ್, ಕುಬೇರನಾಯ್ಕ್, ಕುಮಾರ ನಾಯ್ಕ್, ತಿಪ್ಪಾನಾಯ್ಕ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ನಗರದಲ್ಲಿ ಇಂದು ವಿದ್ಯುತ್ ಸರಬರಾಜು ಇಲ್ಲ

ಶಿವಕುಮಾರಸ್ವಾಮಿ ಬಡಾವಣೆ 1 ಮತ್ತು 2ನೇ ಹಂತ, ಹದಡಿ ರಸ್ತೆ, ಸರ್ಕಾರಿ ಐಟಿಐ ಕಾಲೇಜು, ಸೇಂಟ್ ಜಾನ್ಸ್ ಸ್ಕೂಲ್, 60 ಅಡಿ ರಸ್ತೆ ಹಾಗೂ ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ಇರುವುದಿಲ್ಲ.

## ಕೃಷಿ ಪ್ರಶಸ್ತಿ ಬೆಳೆ ಸ್ಪರ್ಧೆಗೆ ರೈತರಿಂದ ಅರ್ಜಿ ಆಹ್ವಾನ

ದಾವಣಗೆರೆ, ಆ. 22 - ಕೃಷಿ ಇಲಾಖೆ ವತಿಯಿಂದ ರೈತರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ 2024-25ನೇ ಸಾಲಿನ ಕೃಷಿ ಪ್ರಶಸ್ತಿಗೆ ರೈತ ಬಾಂಧವರಿಂದ ಹಾಗೂ ಪ್ರತ್ಯೇಕವಾಗಿ ರೈತ ಮಹಿಳೆಯರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲಾ ಮಟ್ಟಕ್ಕೆ ಮುಸುಕಿನ ಜೋಳ (ಮಳೆಯಾಶ್ರಿತ) ಬೆಳೆಯನ್ನು ಮತ್ತು ತಾಲ್ಲೂಕು ಮಟ್ಟಕ್ಕೆ ದಾವಣಗೆರೆ, ಚನ್ನಗಿರಿ, ಹರಿಹರ ಹಾಗೂ ಹೊನ್ನಾಳಿ ತಾಲ್ಲೂಕುಗಳಿಗೆ ಮುಸುಕಿನಜೋಳ (ಮಳೆಯಾಶ್ರಿತ) ಬೆಳೆಯನ್ನು ನಿಗದಿಪಡಿಸಲಾಗಿದೆ. ಆಸಕ್ತ ರೈತರು ಮುಂಗಾರು ಹಂಗಾಮಿಗೆ ಇದೇ 31 ಹಾಗೂ ಹಿಂಗಾರು ಹಂಗಾಮಿಗೆ ನ.30 ರೊಳಗಾಗಿ ಕೃಷಿ ಪ್ರಶಸ್ತಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳನ್ನು ಸಂಪರ್ಕಿಸಲು ದಾವಣಗೆರೆ ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ಕ್ರೀಡಾ ಪೋಷಕ ಪ್ರಶಸ್ತಿಗೆ ಅರ್ಜಿ

ದಾವಣಗೆರೆ,ಆ.22- ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ನೀಡಲು ಕ್ರೀಡಾ ಪೋಷಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಸೆಪ್ಟೆಂಬರ್ 10 ರೊಳಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ, ಸ್ಟೇಡಿಯಂ, ದಾವಣಗೆರೆ ಇಲ್ಲಿಗೆ ಅರ್ಜಿ ಸಲ್ಲಿಸಲು ಸಹಾಯಕ ನಿರ್ದೇಶಕರಾದ ಜಯಲಕ್ಷ್ಮಿ ಬಾಯಿ ತಿಳಿಸಿದ್ದಾರೆ.

## ವಿನೋಬನಗರದ ಶ್ರೀ ಚೌಡೇಶ್ವರಿ ದೇವಿ, ಬನ್ನಿಮಹಾಂಕಾಳಿ ದೇವಿಯ ಹೊಳೆ ಪೂಜೆ

ವಿನೋಬನಗರದ 2ನೇ ಮುಖ್ಯರಸ್ತೆಯಲ್ಲಿರುವ ಶ್ರೀ ಚೌಡೇಶ್ವರಿ ದೇವಿಯ ಮತ್ತು 2ನೇ ಮುಖ್ಯರಸ್ತೆಯಲ್ಲಿರುವ ನವವೃಕ್ಷಧಾಮದಲ್ಲಿರುವ ಶ್ರೀ ಬನ್ನಿಮಹಾಂಕಾಳಿ ದೇವಿಯ ಹೊಳೆ ಪೂಜೆಯು ಇಂದು ಮಧ್ಯಾಹ್ನ 12 ಗಂಟೆಗೆ ಹರಿಹರದ ತುಂಗಾಭದ್ರಾ ನದಿಯ ದಡದಲ್ಲಿ ನೆರವೇರಲಿದೆ. ದಿ.ಯಲವಟ್ಟಿ ಶ್ರೀಮತಿ ಬಸಮ್ಮ ಮತ್ತು ದಿ. ಬಸಪ್ಪ ಮತ್ತು ವಂಶಸ್ಥರಿಂದ ಪ್ರಸಾದದ ಸೇವಾಕರ್ತರಾಗಿದ್ದಾರೆ.

## ಕ್ರೀಡಾಕೂಟ : ಕುಸ್ತಿಯಲ್ಲಿ ಸುರೇಶ್ ಪ್ರಥಮ



ದಾವಣಗೆರೆ, ಆ. 22- ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟದ ಕುಸ್ತಿಯಲ್ಲಿ ಪ್ರಥಮ ಸ್ಥಾನ ಗಳಿಸಿದ ಸುರೇಶ್ ಹಾಗೂ ತೃತೀಯ ಸ್ಥಾನ ಗಳಿಸಿದ ಕನ್ನಪ್ಪ ಅವರುಗಳನ್ನು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಶಿರಸ್ತೇದಾರ ಮಾರುತಿ ಪ್ರಸಾದ್, ಕೆ.ಎಂ. ಮಂಜುನಾಥ್ ಹಾಗೂ ಶ್ರೀಮತಿ ಲತಾದೇವಿ ಉಪಸ್ಥಿತರಿದ್ದರು.



## ತಾಲ್ಲೂಕು ಮಟ್ಟಕ್ಕೆ ದೇವರಬೆಳಕೆರೆ ಮೈಲಾರಲಿಂಗೇಶ್ವರ ಪ್ರೌಢಶಾಲೆ

ಮಲೇಬೆನ್ನೂರು, ಆ.22- ಗುಳದಹಳ್ಳಿಯಲ್ಲಿ ಗುರುವಾರ ಜರುಗಿದ ದೇವರಬೆಳಕೆರೆ ವಲಯ ಮಟ್ಟದ ಕ್ರೀಡಾಕೂಟದಲ್ಲಿ ದೇವರಬೆಳಕೆರೆ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಪ್ರೌಢಶಾಲೆಯ ಬಾಲಕಿಯರರು ಖೋ ಖೋ ಹಾಗೂ ವಾಲಿಬಾಲ್ ನಲ್ಲಿ ಪ್ರಥಮ ಮತ್ತು ಬಾಲಕರು ಖೋಖೋ ದಲ್ಲಿ ಪ್ರಥಮ ಸ್ಥಾನಗಳಿಸಿ, ತಾಲ್ಲೂಕು ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆಂದು ಶಾಲೆಯ ದೈಹಿಕ ಶಿಕ್ಷಕ ಎಂ.ಹೆಚ್.ಅರುಣ್ ತಿಳಿಸಿದ್ದಾರೆ.



## ಮಹಿಳೆಯರ - ಮಕ್ಕಳ ರಕ್ಷಣೆಗೆ ದುರ್ಗಾ ಪಡೆ ಸದಾ ಸಿದ್ಧ


ದಾವಣಗೆರೆ, ಆ.22- ಜಿಲ್ಲಾ ಪೊಲೀಸ್ 'ದುರ್ಗಾ ಪಡೆ'ಯು ನಗರದ ಶಾಲಾ-ಕಾಲೇಜು, ಮಹಿಳಾ ವಿದ್ಯಾರ್ಥಿ ನಿಲಯ ಮತ್ತು ಸಾರ್ವಜನಿಕ ವಲಯದ ಪಾರ್ಕ್‌ಗಳಿಗೆ ಭೇಟಿ ನೀಡಿ ಸೈಬರ್ ಕ್ರೈಂ ಮತ್ತು ಮಹಿಳಾ ದೌರ್ಜನ್ಯ ಕಾಯ್ದೆಗಳ ಬಗ್ಗೆ ಅರಿವು ಮೂಡಿಸಿದರು.

ಪಾರ್ಕ್‌ಗಳಲ್ಲಿರುವ ಹಿರಿಯ ನಾಗರಿಕರು ಮತ್ತು ಶಾಲಾ-ಕಾಲೇಜಿನ ಮಕ್ಕಳಿಗೆ ಭೇಟಿಯಾಗಿ ಹಿರಿಯ ನಾಗರಿಕರ ತುರ್ತು ಸಹಾಯವಾಣಿ 112 ಬಳಕೆ ಬಗ್ಗೆ ಮತ್ತು ಡ್ರಗ್ಸ್ ವ್ಯಸನದಿಂದ ಉಂಟಾಗುವ ದುಷ್ಪರಿಣಾಮದ ಬಗ್ಗೆ ಜಾಗೃತಿ ಮೂಡಿಸಿದರು.

ಕಾಲೇಜು, ಸಾರ್ವಜನಿಕ ರಸ್ತೆ ಹಾಗೂ ಪಾರ್ಕ್‌ಗಳಲ್ಲಿ ಮಹಿಳೆಯರನ್ನು ಚುಡಾಯಿಸುವ ಪ್ರವೃತ್ತಿಯುಳ್ಳ ಯುವಕರಿಗೆ ಮತ್ತು ಸಾರ್ವಜನಿಕರಿಗೆ ತೊಂದರೆ ಕೊಡುವ ಪುಢಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಖಡಕ್ ಎಚ್ಚರಿಕೆ ನೀಡಿದ್ದಾರೆ.

ತರಗತಿಗಳಿಗೆ ಬಂಕ್ ಹಾಕಿ ರಸ್ತೆ ಸುತ್ತುವ ಹಾಗೂ ಹರಟೆ ಹೊಡೆಯುತ್ತಾ ಕುಳಿತ ವಿದ್ಯಾರ್ಥಿಗಳಿಗೆ ದುರ್ಗಾ ಪಡೆಯು ಸೂಕ್ತ ಬುದ್ಧಿ ಮಾತು ಹೇಳುವ ಮೂಲಕ ಶೈಕ್ಷಣಿಕ ಜೀವನದಲ್ಲಿ ಉತ್ತಮವಾಗಿ ಓದಿನಲ್ಲಿ ತೊಡಗಿ ಸುಭದ್ರ ಭವಿಷ್ಯ ರೂಪಿಸಿಕೊಳ್ಳುವಂತೆ ಕಿವಿಮಾತು ಹೇಳಿದರು.

ನಗರದಲ್ಲಿ ಯುವತಿಯರನ್ನು ಚುಡಾಯಿಸುವುದು, ಕಿರುಕುಳ ನೀಡುವುದು ಮತ್ತು ಬೀದಿ ಕಾಮಣ್ಣರ ಕಾಟ ಕಂಡು ಬಂದ ಕೂಡಲೇ ತುರ್ತು ಸಹಾಯವಾಣಿ 112 ಅಥವಾ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ ನಂ. 9480803200 ಗೆ ಕರೆ ಮಾಡಿ ತಿಳಿಸಿದ್ದಾರೆ.

ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ
Numero Astrologer & palmistry

ವಂಶಾಪಾರಂಪರಿಕ ಮಾಂತ್ರಿಕ ಜ್ಯೋತಿಷ್ಯರು, ವಶೀಕರಣ ಸ್ಪೆಷಾಲಿಸ್ಟ್. ನೀವು ಇಷ್ಟಪಟ್ಟವರು ನಿಮ್ಮಂತಾಗಲು
ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಕುಜ ದೋಷ ಮತ್ತು ನಾಗ ದೋಷ, ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಮಾನಸಿಕ ಚಿಂತೆ, ಹೋಮ ಹವನದಿಂದ
ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 11 ದಿನದೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಬೇಟಿ ನೀಡಿ.
ಮನೆ ವಿಳಾಸ : ಪಂಡಿತ್. ಜಿ.ವಿ. ಭಟ್ಟರ್
ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತ, ಹದಡಿ ರಸ್ತೆ, ದಾವಣಗೆರೆ
ಮೊ : 89716 99826, 99644 84508

